ಕರ್ನಾಟಕ ವಿಧಾನಪರಿಷತ್ತಿನ ನಡವಳಿಕೆಗಳು

# KARNATAKA LEGISLATIVE COUNCIL DEBATES

ಅಧಿಕೃತ ವರದಿ

## OFFICIAL REPORT

೧೩೦ ನೇ ಅಧಿವೇಶನ

**130th SESSION**

ಸಂಪುಟ–೪೪೩ ಕ್ರಮಾಂಕ ( ೧)

**Volume -443 (No. 1)**

( ೨೪ ನೇ ಮಾರ್ಚ್ ೨೦೧೬)

**(24th March 2016)**

ಕರ್ನಾಟಕ ವಿಧಾನ ಪರಿಷತ್ತಿನ ಸಚಿವಾಲಯ, ಬೆಂಗಳೂರು

**Karnataka Legislative Council Secretariat, Bangalore**

## ಕರ್ನಾಟಕ ವಿಧಾನ ಪರಿಷತ್ತು

24ನೇ ಮಾರ್ಚ್ 2016

ಗುರುವಾರ

## ವಿಷಯಾನುಕ್ರಮಣಿಕೆ

1. ಸರ್ಕಾರ ಶ್ರೀ ಅನ್ವರ್ ಮಾನಪ್ಪಾಡಿಯವರ ವರದಿಯನ್ನು ಮಂಡನೆ ಮಾಡುವ ಬಗ್ಗೆ ಚರ್ಚೆ 2-18

ಶ್ರೀ ಗೋ.ಮಧುಸೂದನ್

ಶ್ರೀ ಎಸ್.ಆರ್.ಪಾಟೀಲ್ (ಸಭಾನಾಯಕರು)

ಶ್ರೀ ಕೆ.ಎಸ್.ಈಶ್ವರಪ್ಪ (ವಿರೋಧ ಪಕ್ಷದ ನಾಯಕರು)

ಶ್ರೀ ಬಸವರಾಜ ಹೊರಟ್ಟಿ

ಶ್ರೀ ಸಿದ್ದರಾಮಯ್ಯ (ಮುಖ್ಯಮಂತ್ರಿಗಳು)

ಶ್ರೀ ಪುಟ್ಟಣ್ಣ

ಶ್ರೀ ಕೆ.ಬಿ.ಶಾಣಪ್ಪ

ಶ್ರೀ ಆರ್.ವಿ.ವೆಂಕಟೇಶ್ (ಸರ್ಕಾರದ ಮುಖ್ಯ ಸಚೇತಕರು)

**ಕರ್ನಾಟಕ ವಿಧಾನ ಪರಿಷತ್ತು**

***ಗುರುವಾರ, 24ನೇ ಮಾರ್ಚ್ 2016***

**ಸದನವು ವಿಧಾನ ಸೌಧದಲ್ಲಿರುವ ವಿಧಾನ ಪರಿಷತ್ತಿನ ಸಭಾಂಗಣದಲ್ಲಿ ಪೂರ್ವಾಹ್ನ 10 ಗಂಟೆ 27 ನಿಮಿಷಕ್ಕೆ ಸಮಾವೇಶಗೊಂಡಿತು.**

**ಉಪ ಸಭಾಪತಿ (ಶ್ರೀ ಮರಿತಿಬ್ಬೇಗೌಡ) ಅವರು ಪೀಠದಲ್ಲಿ ಉಪಸ್ಥಿತರಿದ್ದರು.**

~~~~~~~
~~~~~~~

1. **ಸರ್ಕಾರ ಅನ್ವರ್ ಮಾನಪ್ಪಾಡಿಯವರ ವರದಿಯನ್ನು ಮಂಡನೆ ಮಾಡುವ ಬಗ್ಗೆ ಚರ್ಚೆ.**

– – – –

**ಶ್ರೀ ಗೋ.ಮಧುಸೂದನ್(ಪದವೀಧರರ ಕ್ಷೇತ್ರ):–** ಸನ್ಮಾನ್ಯ ಸಭಾಪತಿಯವರೇ, ಕಳೆದ ಅನೇಕ ದಿನಗಳಿಂದ ನಡೆದ ಚರ್ಚೆಗೆ ಸದನದಲ್ಲಿ ನಾವು ಕಾನೂನು ಸಚಿವರಿಂದ ಉತ್ತರ ಕೊಡಿಸುತ್ತೇವೆ, ಗುರುವಾರ ಬೆಳಿಗ್ಗೆ ಅದೇ ಮೊದಲ ಕೆಲಸ, ಆ ಕೆಲಸ ಮಾಡಿದ ನಂತರವೆ ಬೇರೆ ಕೆಲಸ ಮಾಡುತ್ತೇವೆ ಎಂದು ಹೇಳಿ ನಮ್ಮ ಸಭಾ ನಾಯಕರು ಸದನಕ್ಕೆ ಅನೇಕ ಸಲ ಭರವಸೆಗಳನ್ನು ಕೊಟ್ಟಿದ್ದಾರೆ. ಅವರು ನುಡಿದಂತೆ ನಡೆಯುವವರು, ನಡೆದಂತೆ ನುಡಿಯುವವರು ಆ ಕಾರಣಕ್ಕೋಸ್ಕರವಾಗಿ ಮತ್ತು ಅದರ ಜೊತೆಗೆ ಮಾನ್ಯ ಪರಮೇಶ್ವರ್ ಅವರು ಇದ್ದಾರೆ. ಇವತ್ತು ನಾವು ಕೇಳುತ್ತಿರುವುದಿಷ್ಟೆ. ಏಕೋ ಸದನ ಪ್ರಾರಂಭವಾಗುತ್ತಿದ್ದಂತೆ ಮಾನ್ಯ ಟಿ.ಬಿ. ಜಯಚಂದ್ರರವರು ನಮಗೆ ಕಾಣಿಸುತ್ತಿಲ್ಲ. ಆದರೆ ನಮ್ಮ ಅದೃಷ್ಟಕ್ಕೆ ಮಾನ್ಯ ಜಯಚಂದ್ರರವರನ್ನು ಕೇಳಬೇಕಾದಂತಹ ಅವಶ್ಯಕತೆಯೇ ಇಲ್ಲ, ಸನ್ಮಾನ್ಯ ಮುಖ್ಯಮಂತ್ರಿಗಳೇ ಬಂದಿರಬೇಕಾದರೆ ನಾವು ಬೇರೆ ಇನ್ಯಾರನ್ನೂ ಕೇಳುವುದಿಲ್ಲ. ಸನ್ಮಾನ್ಯ ಮುಖ್ಯಮಂತ್ರಿಗಳು ಶ್ರೀ ಅನ್ವರ್ ಮಾನಪ್ಪಾಡಿಯವರ ವರದಿಯನ್ನು ಸದನದಲ್ಲಿ ಮಂಡಿಸಬೇಕೆಂದು ನಾನು ಕೇಳಿಕೊಳ್ಳುತ್ತಿದ್ದೇನೆ. ಅದು ಆಗಬೇಕು ನಂತರ ಪ್ರಶ್ನೋತ್ತರವನ್ನು ತೆಗೆದುಕೊಳ್ಳಬೇಕು.

**ಉಪ ಸಭಾಪತಿಯವರು:–** ಮಾನ್ಯ ಮಧುಸೂದನ್‌ರವರೆ, ದಯವಿಟ್ಟು ಕುಳಿತುಕೊಳ್ಳಿ.

**ಶ್ರೀ ಎಸ್.ಆರ್.ಪಾಟೀಲ್( ಸಭಾನಾಯಕರು):–** ಸನ್ಮಾನ್ಯ ಸಭಾಪತಿಯವರೇ, ಕಾನೂನು ಸಚಿವರಾದಂತಹ ಸನ್ಮಾನ್ಯ ಟಿ.ಬಿ.ಜಯಚಂದ್ರರವರು ಘನತೆವೆತ್ತ ರಾಜ್ಯಪಾಲರ ಜೊತೆ ಘಟಿಕೋತ್ಸವಕ್ಕೆ ಹೋಗಿದ್ದಾರೆ. ನಮ್ಮ ಜೊತೆ ದೂರವಾಣಿಯಲ್ಲಿ ಮಾತನಾಡಿದ್ದಾರೆ, ತಮ್ಮ ಜೊತೆಯಲ್ಲಿಯೂ ಸಹ ಮಾತನಾಡಿದ್ದಾರೆ. ಮಾನ್ಯ ಸಚಿವರು ಎರಡೂವರೆ ಗಂಟೆಗೆ ಬರುತ್ತೇನೆ, ಮೂರು ಗಂಟೆಗೆ ಬಂದು ನಾನು ಅದಕ್ಕೆ ಸರಿಯಾದಂತಹ ಕ್ರಮ ಕೈಗೊಳ್ಳುತ್ತೇನೆ ಎಂಬ ಮಾತನ್ನು ಹೇಳಿದ್ದಾರೆ. ಮಾನ್ಯ ಸಭಾ ನಾಯಕರು ನುಡಿದಂತೆ ನಡೆಯುವವರು, ನಡೆದಂತೆ ನುಡಿಯುವವರು ಎಂದು ಮಾನ್ಯ ಮಧುಸೂದನ್‌ರವರು ಹೇಳಿದರು. ಅದರಲ್ಲಿ ಏನು ಬದಲಾವಣೆ ಇಲ್ಲ. ಹೇಗೆ ನುಡಿಯುತ್ತೇನೆ, ಆ ರೀತಿ ನಡೆಯುತ್ತೇನೆ; ಹೇಗೆ ನಡೆಯುತ್ತೇನೆ ಹಾಗೆ ನುಡಿಯುತ್ತೇನೆ. ಆದರೆ ಇವತ್ತು ನಾನು ಗುರುವಾರ ಬೆಳಿಗ್ಗೆ ಬಂದ ಕೂಡಲೆ ಮೊದಲನೆಯದು ಎಂದು ನಾನು ಹೇಳಿಲ್ಲ. ಬೇಕಾದರೆ ಕಡತ ತೆಗೆದು ನೋಡಿ. ನಾನು ಗುರುವಾರದ ದಿವಸ ಮಾನ್ಯ ಕಾನೂನು ಸಚಿವರು ಬರುತ್ತಾರೆ.... ಮಾನ್ಯ ಸಭಾಪತಿಯವರೇ, ಮಾನ್ಯ ಕಾನೂನು ಸಚಿವರು ಗುರುವಾರದ ದಿವಸ ಸದನಕ್ಕೆ ಬಂದು ಅದಕ್ಕೆ ಉತ್ತರಿಸುತ್ತಾರೆ ಎನ್ನುವಂತಹ ಮಾತನ್ನು ಹೇಳಿದೆ. ಗುರುವಾರ ಬೆಳಿಗ್ಗೆ ಪ್ರಥಮ ಬಾರಿಗೆ, ಓಂ ಪ್ರಥಮ ಎಂದು ನಾನೇನು ಹೇಳಿಲ್ಲ. ಬೇಕಾದರೆ ಕಡತ ತೆಗೆದು ನೋಡಿ. ನಾನು ನುಡಿದಂತೆ ನಡೆಯುವುದರೊಳಗೆ ಎರಡು ಮಾತಿಲ್ಲ. ಅವರೇನು ಬಹಳ ಆ ಮಾತನ್ನು ಚುಚ್ಚಿ–ಚುಚ್ಚಿ ಹೇಳುತ್ತಾರೆ. ಅದರಲ್ಲಿ ಬದಲಾವಣೆ ಆಗುವ ಪ್ರಶ್ನೆಯೇ ಇಲ್ಲ. ಅದು ನನ್ನ ಜಯಾಮಾನದಲ್ಲಿಯೇ ಬಂದಿಲ್ಲ.

**ಶ್ರೀ ಗೋಮಧುಸೂದನ್:–** ಮಾನ್ಯ ಸಭಾಪತಿಯವರೇ, ...

**ಉಪ ಸಭಾಪತಿಯವರು:–** ಮಾನ್ಯ ಸಭಾಪತಿಯವರೇ, ದಯವಿಟ್ಟು ಕುಳಿತುಕೊಳ್ಳಿ.

**ಶ್ರೀ ಗೋ.ಮಧುಸೂದನ್:–** ಮಾನ್ಯ ಸಭಾಪತಿಯವರೇ, ಅವರು ಹೇಳಿದ್ದು ಏನೆಂದರೆ...

**(ಗೊಂದಲ)**

**ಉಪ ಸಭಾಪತಿಯವರು:–** ಮಾನ್ಯ ಮಧುಸೂದನ್‌ರವರೆ, ದಯಮಾಡಿ ಕುಳಿತುಕೊಳ್ಳಿ. ನನಗೂ ಕೂಡ ಬೆಳಿಗ್ಗೆ ಕಾನೂನು ಸಚಿವರು ದೂರವಾಣಿಯಲ್ಲಿ ಮಾತನಾಡಿ ಶಿವಮೊಗ್ಗದಲ್ಲಿ ಘನತೆವೆತ್ತ ರಾಜ್ಯಪಾಲರ

ಜೊತೆಯಲ್ಲಿ ನಾವು ಹೆಲಿಕಾಪ್ಟರ್‌ನಲ್ಲಿ ಘಟಿಕೋತ್ಸವಕ್ಕೆ ಹೋಗುತ್ತಿದ್ದೇವೆ. ನಾನು ಮತ್ತೇ ಇದೇ ದಿನ ಮಧ್ಯಾಹ್ನ ಮೂರು ಗಂಟೆಗೆ ಬಂದು ಸದನದಲ್ಲಿ ಹಾಜರಾಗುತ್ತೇನೆ. ಮತ್ತೆ ಸದನದಲ್ಲಿ ನಾವೇನು ಅಭಿಪ್ರಾಯವನ್ನು ವ್ಯಕ್ತ ಮಾಡಿದ್ದೇವೆ ಆ ಕಾರ್ಯಕಲಾಪಗಳಲ್ಲಿ ಮೂರು ಗಂಟೆಗೆ ನಾನು ಭಾಗವಹಿಸುತ್ತೇನೆಂದು ನನಗೆ ಹೇಳಿದ್ದಾರೆ. ಆದಕಾರಣ ದಯಮಾಡಿ ಈಗ ಪ್ರಶ್ನೋತ್ತರ ವೇಳೆಯನ್ನು ತೆಗೆದುಕೊಳ್ಳುತ್ತೇನೆ. ಮೂರು ಗಂಟೆಗೆ ಕಾನೂನು ಸಚಿವರು ಬಂದ ನಂತರ ಆ ವರದಿಯನ್ನು ಅವರು ಮಂಡಿಸುತ್ತಾರೆ.

**ಶ್ರೀ ಗೋ.ಮಧುಸೂದನ್:-** ಮಾನ್ಯ ಸಭಾಪತಿಯವರೇ, ಈ ಸದನದಲ್ಲಿ ಮಾನ್ಯ ಮುಖ್ಯಮಂತ್ರಿಗಳು....

**ಉಪ ಸಭಾಪತಿಯವರು:-** ಮಾನ್ಯ ಮಧುಸೂದನ್‌ರವರೇ, ನಾನು ಬಹಳ ಸ್ಪಷ್ಟವಾಗಿ ಹೇಳಿದ್ದೇನೆ. ದಯವಿಟ್ಟು ಕುಳಿತುಕೊಳ್ಳಿ.

**ಶ್ರೀ ಕೆ.ಎಸ್.ಈಶ್ವರಪ್ಪ(ವಿರೋಧ ಪಕ್ಷದ ನಾಯಕರು):-**ಮಾನ್ಯ ಸಭಾಪತಿಯವರೇ, ಇದು ಮೇಲ್ಮನೆ. ಮೇಲ್ಮನೆಯೊಳಗೆ ತುಂಬಾ ಸ್ಪಷ್ಟವಾಗಿಬಿಡಲಿ ಇಡೀ ಕರ್ನಾಟಕ ರಾಜ್ಯಕ್ಕೆ ಇದು ಗೊತ್ತಾಗಬೇಕು. ವರದಿಯನ್ನು ಮಂಡಿಸುವುದಕ್ಕೆ ಕಾನೂನು ಸಚಿವರೇ ಬರಬೇಕೆ? ಏಕೆಂದರೆ, ನನಗೆ ತಿಳುವಳಿಕೆ ಇರುವ ಪ್ರಕಾರ ಯಾವುದೇ ವರದಿಯನ್ನು, ಯಾವುದಾದರು ಮಂತ್ರಿಗಳ ಹತ್ತಿರ ಮಂಡನೆ ಮಾಡುವಂತಹ ಅಭ್ಯಾಸ ಮೊದಲಿನಿಂದಲೂ ನಡೆದುಕೊಂಡು ಬಂದಿದೆ. ವಿಧಾನ ಪರಿಷತ್ತಿನಲ್ಲಂತೂ ಮಾನ್ಯ ಸಭಾ ನಾಯಕರೇ ಎಲ್ಲಾ ಮಂತ್ರಿಗಳದೂ ವರದಿಯನ್ನು ಮಂಡನೆ ಮಾಡುವಂತಹ ಪದ್ಧತಿಯನ್ನು ನಾನು ನೋಡಿಕೊಳ್ಳುತ್ತಾ ಬಂದಿದ್ದೇನೆ. ಅದಕ್ಕೋಸ್ಕರ ಇಲ್ಲಿ ಶ್ರೀ ಅನ್ವರ್ ಮಾನಪ್ಪಾಡಿಯವರ ವರದಿ ಏನಿದೆ, ಅದು ರೆಡಿ ಇದೆ. ಮಾನ್ಯ ಸಭಾ ನಾಯಕರು, ಮಾನ್ಯ ಮುಖ್ಯಮಂತ್ರಿಗಳು, ಮಾನ್ಯ ಗೃಹ ಸಚಿವರು ಮಂಡಿಸುವುದಕ್ಕೆ ಕಾನೂನು ಅಡ್ಡಿ ಇದೆಯೇ? ಇದನ್ನು ನನಗೆ ಸ್ಪಷ್ಟತೆ ಮಾಡಬೇಕೆಂದು ಮಾನ್ಯ ಮುಖ್ಯಮಂತ್ರಿಗಳಲ್ಲಿ ಕೇಳುವುದಕ್ಕೆ ಇಷ್ಟಪಡುತ್ತೇನೆ. ಇದರ ಬಗ್ಗೆ ಸ್ಪಷ್ಟ ಮಾಡಿಬಿಡಿ. ಇಲ್ಲಾ, ಮೇಲ್ಮನೆಯಲ್ಲಿ ಕಾನೂನು ಸಚಿವರೇ ಬಂದು ವರದಿಯನ್ನು ಮಂಡನೆ ಮಾಡಬೇಕೆ? ಇದನ್ನು ತಾವು ಸ್ಪಷ್ಟಪಡಿಸಬೇಕೆಂದು ಕೇಳಬಯಸುತ್ತೇನೆ.

**ಶ್ರೀ ವಿ.ಎಸ್.ಉಗ್ರಪ್ಪ:-** ಮಾನ್ಯ ಸಭಾಪತಿಯವರೇ, point of order raise ಮಾಡಿದ್ದೇನೆ. It is my right. Point of order raise ಮಾಡುವುದಕ್ಕೆ ನನಗೆ ಹಕ್ಕಿದೆ.

**ಉಪ ಸಭಾಪತಿಯವರು:-** ಮಾನ್ಯ ಉಗ್ರಪ್ಪನವರೇ, ದಯವಿಟ್ಟು ಕುಳಿತುಕೊಳ್ಳಿ. ಮಾನ್ಯ ವಿರೋಧ ಪಕ್ಷದ ನಾಯಕರೆ, ಈಗಾಗಲೇ ಸಭಾ ನಾಯಕರು ಸ್ಪಷ್ಟವಾಗಿ ಹೇಳಿದ್ದಾರೆ. ಈ ದಿನ ಮೂರು ಗಂಟೆಗೆ ಕಾನೂನು ಸಚಿವರು ಅವರು ಒಪ್ಪಿಗೆ ಸೂಚಿಸಿರುವಂತೆ ವರದಿ ಮಂಡನೆ ಮಾಡುತ್ತಾರೆ...

**ಶ್ರೀ ಕೆ.ಬಿ.ಶಾಣಪ್ಪ:-** ಮಾನ್ಯ ಸಭಾಪತಿಯವರೇ....

**ಉಪ ಸಭಾಪತಿಯವರು:-** ಮಾನ್ಯ ಶಾಣಪ್ಪನವರೇ, ತಾವು ಹಿರಿಯರಿದ್ದೀರಿ ದಯವಿಟ್ಟು ಕುಳಿತುಕೊಳ್ಳಿ.

**ಶ್ರೀ ಬಸವರಾಜ ಹೊರಟ್ಟಿ:-** ಮಾನ್ಯ ಸಭಾಪತಿಯವರೇ, ಅಧಿವೇಶನ ನಡೆಯುವಾಗ ಹೋಗಬೇಕೆಂದು ಇದೆಯೇ?

**ಉಪ ಸಭಾಪತಿಯವರು:-** ದಯವಿಟ್ಟು ಕುಳಿತುಕೊಳ್ಳಿ.

**ಶ್ರೀ ಬಸವರಾಜ ಹೊರಟ್ಟಿ:-** ಮಾನ್ಯ ಸಭಾಪತಿಯವರೇ, ವಿಧಾನ ಸಭೆ ಮತ್ತು ವಿಧಾನ ಪರಿಷತ್ತು ನಡೆಯುವಾಗ ಹೇಗೆ ಹೋಗುತ್ತೀರಿ? ಅಲ್ಲೇನಿದೆ? ಎಲ್ಲಾ ಯೂನಿರ್ವಸಿಟಿಗಳಿಗೂ ಹೋಗುತ್ತಾರೆಯೆ? ಸದನ ಮುಖ್ಯವೋ ಅಥವಾ convocation ಮುಖ್ಯವೋ?

**(ಗೊಂದಲ)**

**ಉಪ ಸಭಾಪತಿಯವರು:-** ಮಾನ್ಯ ಹೊರಟ್ಟಿಯವರೇ, ತಾವು ಹಿರಿಯರಿದ್ದೀರಿ ದಯಮಾಡಿ ಕುಳಿತುಕೊಳ್ಳಿ.

**(ಗೊಂದಲ)**

**ಶ್ರೀ ಬಸವರಾಜ ಹೊರಟ್ಟಿ:–** ಮಾನ್ಯ ಸಭಾಪತಿಯವರೇ, ದಯಮಾಡಿ ತಪ್ಪು ತಿಳಿಯಬೇಡಿ. ಸದನ ನಡೆಯುವಾಗ ಯಾವ ಸಚಿವರು ಸಹ ಅದು extraordinary ಇದ್ದರೆ ಹೋಗಬೇಕಾಗುತ್ತದೆ. Convocationಗೆ ಶಿಕ್ಷಣ ಸಚಿವರು ಹೋಗಬೇಕೆಂದು ಕಾಯಿದೆ ಇದೆಯೇ? ಬೇಕಾದರೆ ರೂಲ್ ತೆಗೆದು ನೋಡಿ. ಏಕೆ ಹೋಗುತ್ತಾರೆ ಇವರು? ಎಲ್ಲದಕ್ಕೂ ಹೋಗುತ್ತಾರೆಯೇ?

**(ಗೊಂದಲ)**

**ಶ್ರೀ ಬಸವರಾಜ ಹೊರಟ್ಟಿ:–** ಮಾನ್ಯ ಸಭಾಪತಿಯವರೇ, ಇವರು ಬೇರೆ convocation ಗಳಿಗೆ ತಪ್ಪಿಸಿಕೊಂಡಿರುವಂಥದ್ದನ್ನು ಕೊಡಲೆ ನಿಮಗೆ?

**(ಗೊಂದಲ)**

**ಡಾ:ಮತ್ತಿಕಟ್ಟಿ ವೀರಣ್ಣ:–** ಅವರೇನು ತಮ್ಮ ಮನೆಗೆ ಹೋಗಿಲ್ಲ. ಅವರ ಮನೆಯ ಕಾರ್ಯಕ್ರಮಕ್ಕೆ ಹೋಗಿಲ್ಲ. As a Co-Chancellor it is his responsibility and he has to attend it. He has to create confidence in the students and…..

**(ಗೊಂದಲ)**

**ಉಪ ಸಭಾಪತಿಯವರು:–** ಮಾನ್ಯ ಬಸವರಾಜ ಹೊರಟ್ಟಿಯವರೇ, ದಯಮಾಡಿ ಕುಳಿತುಕೊಳ್ಳಿ.

**ಶ್ರೀ ಬಸವರಾಜ ಹೊರಟ್ಟಿ:–** ಒಂದು ನಿಮಿಷ ನಾನು ಇದರ ಬಗ್ಗೆ clarify ಮಾಡುತ್ತೇನೆ.

**ಉಪ ಸಭಾಪತಿಯವರು:–** ಈಗ ನೀವು ಮಾತನಾಡಿದ್ದೀರಿ ಅಲ್ಲವೆ, ದಯವಿಟ್ಟು ಕುಳಿತುಕೊಳ್ಳಿ. ಮಾನ್ಯ ಮುಖ್ಯ ಮಂತ್ರಿಗಳು ಎದ್ದು ನಿಂತಿದ್ದಾರೆ ದಯವಿಟ್ಟು ಕುಳಿತುಕೊಳ್ಳಿ.

**ಶ್ರೀ ಸಿದ್ದರಾಮಯ್ಯ(ಮುಖ್ಯ ಮಂತ್ರಿಗಳು):–** ಮಾನ್ಯ ಸಭಾಪತಿಯವರೇ, ವಿಧಾನ ಪರಿಷತ್ತು ನಡೆಯುವಂತಹ ಸಂದರ್ಭದಲ್ಲಿ ಏಕೆ ಹೋಗಬೇಕೆಂಬ ಪ್ರಶ್ನೆಯನ್ನು ಮಾನ್ಯ ಬಸವರಾಜ ಹೊರಟ್ಟಿಯವರು ಕೇಳಿದರು. ಮಾನ್ಯ ರಾಜ್ಯಪಾಲರು ಘಟಿಕೋತ್ಸವಕ್ಕೆ ಸಮಯ ಕೊಟ್ಟಿರುತ್ತಾರೆ. ಅವರು ವಿಧಾನ ಸಭೆ ಮತ್ತು ವಿಧಾನ ಪರಿಷತ್ತು ನಡೆಯುವಂತಹ ಸಮಯದಲ್ಲಿಯೇ ಕೊಟ್ಟಿದ್ದಾರೆ. ಮಾನ್ಯ ಟಿ.ಬಿ.ಜಯಚಂದ್ರರವರು ಕಾನೂನು ಸಚಿವರಲ್ಲದೆ, ಉನ್ನತ ಶಿಕ್ಷಣ ಸಚಿವರೂ ಕೂಡ ಆಗಿದ್ದಾರೆ. ರಾಜ್ಯಪಾಲರು ಸಮಯ ಕೊಟ್ಟು, ಅವರು ಆ functionಗೆ ಹೋಗುತ್ತಿರುವಾಗ ಉನ್ನತ ಶಿಕ್ಷಣ ಸಚಿವರು ಕೂಡ ಇರಬೇಕಾಗುತ್ತದೆ. ಹಾಗಾಗಿ ಹೊಗಿದ್ದಾರೆ. ಇವರು ಸದನಕ್ಕೆ ಅಗೌರವ ತೋರಿಸುವುದಕ್ಕೋಸ್ಕರವಾಗಿ, ಸದನ ನಡೆಯುವಾಗ ಹೋಗಿದ್ದಾರೆ ಎನ್ನುವಂತಹ ಅಭಿಪ್ರಾಯ ತಾಳುವಂಥದ್ದು ಸರಿ ಇಲ್ಲ. ಏಕೆಂದರೆ ಮಾನ್ಯ ರಾಜ್ಯಪಾಲರು ನಮ್ಮನ್ನು ಕೇಳಿ ಸಮಯ ಕೊಡುವುದಿಲ್ಲ. ಮಾನ್ಯ ರಾಜ್ಯಪಾಲರು ಮಂತ್ರಿ ಕೇಳಿ ಸಮಯ ಕೊಡುತ್ತಾರೆಯೇ? ರಾಜ್ಯಪಾಲರು ಯೂನಿರ್ವಸಿಟಿಗೆ ಘಟಿಕೋತ್ಸವಕ್ಕೆ ಇಂಥ ತಾರೀಖಿನಂದು ಬರುತ್ತೇನೆಂದು ಒಪ್ಪಿಕೊಂಡಿದ್ದಾರೆ. ಅದು ಪರಿಷತ್ತು ನಡೆಯುವಾಗಲೇ ಬಂದಿದೆ. ಹಾಗಾಗಿ ಅವರು ಉನ್ನತ ಶಿಕ್ಷಣ ಸಚಿವರಾಗಿ ಹೋಗಿದ್ದಾರೆ. ಇದು ಒಂದು. ಎರಡನೆಯದು, ನಮ್ಮ Leader of the Opposition ಇದ್ದಾರಲ್ಲ, ವರದಿ ಮಂಡಿಸುವುದಕ್ಕೆ ಅಥವಾ ಯಾವುದೇ ಕಾಗದ ಪತ್ರಗಳನ್ನು ಮಂಡಿಸುವುದಕ್ಕೆ ಸರ್ಕಾರದ ಯಾವ ಮಂತ್ರಿಗಳಾದರು ಕೂಡ ಮಂಡಿಸಬಹುದು. because, ಸರ್ಕಾರ ಎಂದರೆ, joint responsibility, collective responsibility ಇರುತ್ತದೆ ಎಂದು ಹೇಳಿದರು ಅದು ಬೇರೆ. ಆದರೆ ಈ ವಿಚಾರದಲ್ಲಿ ಕಾನೂನು ಸಚಿವರೇ ಆ ವಿಷಯವನ್ನು ಮೊದಲಿನಿಂದಲೂ ವಿವರಿಸಿಕೊಂಡು ಬಂದಿರುವುದರಿಂದ ಅವರು ನಮ್ಮ ಸಭಾ ನಾಯಕರಿಗೆ ನಾನೇ ಬರುತ್ತೇನೆಂದು ಹೇಳಿದ್ದಾರೆ, ನಿಮಗೂ ಕೂಡ ಮಾತನಾಡಿದ್ದಾರೆ. ಆದುದರಿಂದ ಇದರಲ್ಲಿ ಏನೋ ದುರುದ್ದೇಶದಿಂದ ಹೇಳುತ್ತಿದ್ದಾರೆ ಅಥವಾ ಇನ್ನಾವುದೋ ಕಾರಣಕ್ಕೋಸ್ಕರ ಹೇಳುತ್ತಿದ್ದಾರೆ ಎಂಬ

ಅಭಿಪ್ರಾಯ ಮಾನ್ಯ ಸದಸ್ಯರಾದ ಮಧುಸೂದನ್‌ರವರು ತಾಳುವುದು ಬೇಕಾಗಿಲ್ಲ. ಬರುತ್ತೇನೆಂದು ನನಗೂ ಸಹ ಹೇಳಿದ್ದಾರೆ. ನಿನ್ನೆ ದಿವಸ ಘಟಿಕೋತ್ಸವಕ್ಕೆ ಹೋಗಿ ಮೂರು ಗಂಟೆಗೆ ಬರುತ್ತೇನೆಂದು ನನ್ನ ಜೊತೆ ಮಾತನಾಡಿದ್ದಾರೆ. ಆದುದರಿಂದ ಮೂರು ಗಂಟೆಯವರೆಗೂ ಸ್ವಲ್ಪ ತಾಳಿ. ಅವರು ಬಂದು ಉತ್ತರ ಹೇಳುತ್ತಾರೆ.

**ಶ್ರೀ ಗೋ.ಮಧುಸೂದನ್:–** ಮಾನ್ಯ ಸಭಾಪತಿಯವರೇ, ಎಲ್ಲಾ ಘಟಿಕೋತ್ಸವಕ್ಕೂ ಉನ್ನತ ಶಿಕ್ಷಣ ಸಚಿವರು ಹೋಗಬೇಕೆಂದೇನು ಇಲ್ಲ.

**(ಗೊಂದಲ)**

**ಶ್ರೀ ಸಿದ್ದರಾಮಯ್ಯ:–** ಹೋಗಬೇಕಾಗುತ್ತದೆ ರೀ, ಉನ್ನತ ಶಿಕ್ಷಣದ ಪರವಾಗಿ ಇನ್ಯಾರು ಇರುತ್ತಾರೆ? ಅದನ್ನು ಪ್ರಶ್ನೆ ಮಾಡುವುದಕ್ಕೆ ಆಗುವುದಿಲ್ಲ. ಈ ರೀತಿ ಪ್ರಶ್ನೆ ಮಾಡುತ್ತಾ ಕುಳಿತುಕೊಂಡರೆ, ಉನ್ನತ ಶಿಕ್ಷಣ ಸಚಿವರು ಏತಕ್ಕೆ ಹೋದರು, ಎಲ್ಲದಕ್ಕೂ ಅವರೆ ಏಕೆ ಹೋಗಬೇಕು... ಈ ರೀತಿಯ ಪ್ರಶ್ನೆಗಳನ್ನು.... ನೀವು ಹೇಳಿದಂತೆಯೇ ಕೇಳುವುದಕ್ಕೆ ಆಗುತ್ತದೆಯೇ? ಉನ್ನತ ಶಿಕ್ಷಣ ಏಕೆ ಹೋಗಬೇಕಾಗಿತ್ತು, ಇಲ್ಲಿಯೇ ಇರಬೇಕಾಗಿತ್ತು ಎಂದು ಹೇಳುವುದರಲ್ಲಿ ಅರ್ಥವಿದೆಯೇ? ಅವರು ಮೂರು ಗಂಟೆಗೆ ಬರುತ್ತಾರೆ. ನೀವು ಸಮಾಧಾನವಾಗಿ ಇರಬೇಕಷ್ಟೆ.

**(ಗೊಂದಲ)**

**ಶ್ರೀ ಕೆ.ಎಸ್.ಈಶ್ವರಪ್ಪ:–** ಮಾನ್ಯ ಸಭಾಪತಿಯವರೇ, ನೀವು ನಮ್ಮ ರಕ್ಷಣೆಗೆ ಬರಬೇಕು. ಇಲ್ಲಿರುವಂತಹ ಪ್ರಶ್ನೆ ಏನೆಂದರೆ, ಮಾನ್ಯ ಮುಖ್ಯಮಂತ್ರಿಗಳೆ, ನಮಗೆ ಏಕೆ ಅನುಮಾನ ಬರುತ್ತದೆ ಎಂದರೆ...

**ಶ್ರೀ ವಿ.ಎಸ್.ಉಗ್ರಪ್ಪ:–** ಮಾನ್ಯ ಸಭಾಪತಿಯವರೇ, ನಾನು ಆಗಲೇ point of order raise ಮಾಡುತ್ತೇನೆಂದು ಹೇಳಿದ್ದಕ್ಕೆ ನಮಗೆ allow ಮಾಡಲಿಲ್ಲ. ಯಾವ ನಿಯಮಾವಳಿಯಲ್ಲಿ ಈ ಚರ್ಚೆ ನಡೆಯುತ್ತಿದೆ ?

**(ಗೊಂದಲ)**

**ಉಪ ಸಭಾಪತಿಯವರು:–** ಮಾನ್ಯ ಮುಖ್ಯಮಂತ್ರಿಗಳೇ ಹೇಳಿದ್ದಾರೆ, ಮಾನ್ಯ ಕಾನೂನು ಸಚಿವರು ಮೂರು ಗಂಟೆಯ ಹೊತ್ತಿಗೆ ಬರುತ್ತಾರೆ.

**ಶ್ರೀ ಕೆ.ಎಸ್.ಈಶ್ವರಪ್ಪ:–** ಮಾನ್ಯ ಸಭಾಪತಿಯವರೇ, ದಯವಿಟ್ಟು ನಮ್ಮ ಅನುಮಾನ ಕೇಳಿ ಸರ್. ನಮಗೆ ಏಕೆ ಅನುಮಾನ ಎಂದರೆ Business Advisory Committee ಯಲ್ಲಿ ವರದಿ ಮಂಡಿಸಬೇಕೆಂದು ತೀರ್ಮಾನ ಆಗಿದೆ.

**(ಗೊಂದಲ)**

**ಉಪ ಸಭಾಪತಿಯವರು:–** ಮಾನ್ಯ ಮುಖ್ಯಮಂತ್ರಿಗಳೇ, ಮಾನ್ಯ ಸಚಿವರು ಮೂರು ಗಂಟೆಗೆ ಬರುತ್ತಾರೆ, ಮೂರು ಗಂಟೆಗೆ ಮಂಡಿಸುತ್ತಾರೆಂದು ಹೇಳಿದ್ದಾರೆ. ದಯಮಾಡಿ ಸಭೆ ನಡೆಯುವುದಕ್ಕೆ ಅವಕಾಶ ಮಾಡಿಕೊಡಿ.

**(ಗೊಂದಲ)**

**ಶ್ರೀ ಕೆ.ಎಸ್.ಈಶ್ವರಪ್ಪ:–** ಮಾನ್ಯ ಸಭಾಪತಿಯವರೇ, Business Advisory Committee ಯಲ್ಲಿ ವರದಿ ಮಂಡನೆ ಮಾಡಬೇಕು ಎಂದು ಹೇಳಿದಂತಹ ಸಂದರ್ಭದಲ್ಲಿ ಮಾಡಲಿಲ್ಲ. Court order ಪ್ರಕಾರವು ಮಾಡಲಿಲ್ಲ. ಕೊನೆಗೆ ಏನೋ ಒಂದು ತಂದು ಇಟ್ಟುಬಿಟ್ಟರು. ಇದೇ ಶಿಫಾರಸ್ಸು ಎಂದು ಹೇಳಿ ತಂದಿಟ್ಟರು. ಆದುದರಿಂದ ನಮಗೆ ಇವರು ಇದನ್ನು ಮುಂದಕ್ಕೆ ಹಾಕುವಂತಹ ಪ್ರಯತ್ನದಲ್ಲಿ ತೊಡಗಿದ್ದಾರೆ, ಈ ಅನುಮಾದಲ್ಲಿ ನಮ್ಮ ಮುಂದಿರುವಂತಹ ಪ್ರಶ್ನೆ. ಏಕೆಂದರೆ ಇವತ್ತಿನವರೆಗೂ ಉತ್ತರ ಇಲ್ಲ.

(ಗೊಂದಲ)

**ಶ್ರೀ ವಿ.ಎಸ್.ಉಗ್ರಪ್ಪ:–** ಮಾನ್ಯ ಸಭಾಪತಿಯವರೇ, ವಿಧಾನ ಪರಿಷತ್ತಿನಲ್ಲಿ ನಿಯಮಾವಳಿಗಳ ಪಾಲನೆ ಆಗುತ್ತಿಲ್ಲ ಎಂಬ message ಹೋಗುತ್ತಿದೆ.

**(ಗೊಂದಲ)**

**ಉಪ ಸಭಾಪತಿಯವರು:–** ದಯವಿಟ್ಟು ತಾವು ಅರ್ಥ ಮಾಡಿಕೊಳ್ಳಿ. ಮಾನ್ಯ ಮುಖ್ಯ ಮಂತ್ರಿಗಳೇ ಸದನದಲ್ಲಿ ಕಾನೂನು ಸಚಿವರು ಮೂರು ಗಂಟೆಗೆ ಬರುತ್ತಾರೆ, ಮಂಡಿಸುತ್ತಾರೆಂದು ಹೇಳಿದ ಮೇಲೆ ನೀವು ಸದನ ನಡೆಯುವುದಕ್ಕೆ ಅವಕಾಶ ಮಾಡಿಕೊಡುವುದಿಲ್ಲವೆಂದರೆ ಹೇಗೆ?

**(ಗೊಂದಲ)**

**ಶ್ರೀ ಕೆ.ಎಸ್.ಈಶ್ವರಪ್ಪ:–** ಮಾನ್ಯ ಸಭಾಪತಿಯವರೇ, ನಾನು ಮಾತನಾಡಬೇಕೆ, ಬೇಡವೆ ಹೇಳಿ. ಕಾನೂನು ಸಚಿವರು ಬಂದ ನಂತರ ಏನು ಆಶ್ವಾಸನೆ ಕೊಟ್ಟಿದ್ದೇವೆಯೋ ಆ ಪ್ರಕಾರ ವರದಿ ಮಂಡಿಸುತ್ತೇವೆ ಎಂದು ಮಾನ್ಯ ಮುಖ್ಯಮಂತ್ರಿಗಳು ಹೇಳಲಿ.

**ಶ್ರೀ ಸಿದ್ದರಾಮಯ್ಯ:–** ರೀ, ನೀವು ಹೇಳಿದಂತೆಲ್ಲಾ ಕೇಳುವುದಕ್ಕಾಗುವುದಿಲ್ಲ. ಹೀಗೆಯೇ ಹೇಳಬೇಕು, ಈ ರೀತಿಯಲ್ಲಿಯೇ statement ಮಾಡಬೇಕೆಂದು ಇಲ್ಲ. ಕಾನೂನು ಸಚಿವರು ಮೂರು ಗಂಟೆಗೆ ಬರುತ್ತಾರೆ, ಅವರಿಗೆ ಸಂಬಂಧಪಟ್ಟಿದ್ದು ಅವರು ಉತ್ತರ ಕೊಡುತ್ತಾರೆ.

**(ಗೊಂದಲ)**

**ಶ್ರೀ ಕೆ.ಎಸ್.ಈಶ್ವರಪ್ಪ:–** ಕಾನೂನು ಸಚಿವರು ಬಂದು ಹಾಗಾದರೆ **'ಹರಿಕಥೆ'** ಹೇಳುತ್ತಾರೆಯೇ? ನಾವು ಕೇಳುತ್ತಿರುವುದು ವರದಿ ಮಂಡಿಸುವುದಕ್ಕೆ. ವರದಿ ಮಂಡಿಸುವುದಕ್ಕೆ ನಾವು ಕೇಳುತ್ತಿರುವುದು. ಮಾನ್ಯ ಮುಖ್ಯಮಂತ್ರಿಗಳು ಈ ರೀತಿ ಹೇಳಿಕೆ ಕೊಡುವುದು, ನನಗನ್ನಿಸುತ್ತದೆ ಅವರ ಸ್ಥಾನಕ್ಕೆ ಗೌರವ ಅಲ್ಲ ಅದು.

**(ಗೊಂದಲ)**

**ಶ್ರೀ ಕೆ.ಎಸ್.ಈಶ್ವರಪ್ಪ:–** ನಾವು ಕೇಳುತ್ತಿರುವುದು ವರದಿ ಮಂಡಿಸುತ್ತೇವೆಂದು ಹೇಳಿದ್ದೀರಿ. ಹೇಳಿದ್ದನ್ನು ವರದಿ ಮಂಡಿಸುತ್ತೇವೆಂದು ಮಾನ್ಯ ಮುಖ್ಯಮಂತ್ರಿಗಳು ಹೇಳಲಿ ಎಂದರೆ ನಾನು ...

**(ಗೊಂದಲ)**

**ಶ್ರೀ ಗೋ.ಮಧುಸೂದನ್:–** ಮಾನ್ಯ ಸಭಾಪತಿಯವರು ಮೂರು ಬಾರಿ ರೂಲಿಂಗನ್ನು ನೀಡಿದ್ದಾರೆ.

**ಉಪಸಭಾಪತಿಯವರು:–** ದಯಮಾಡಿ ಮಧುಸೂದನ್‌ರವರು ಕುಳಿತುಕೊಳ್ಳಬೇಕು.

**ಶ್ರೀ ಕೆ.ಎಸ್.ಈಶ್ವರಪ್ಪ(ವಿರೋಧ ಪಕ್ಷದ ನಾಯಕರು):–** ಮಾನ್ಯ ಸಭಾಪತಿಗಳೇ, ನೀವು ಈ ರೀತಿ ರೂಲಿಂಗ್ ಅನ್ನು ನೀಡಿದರೆ ನಾವು ಏನು ಮಾಡುವುದಕ್ಕೆ ಆಗುವುದಿಲ್ಲ. ಸದನದಲ್ಲಿ ಕೂರಬೇಕೆ ಬೇಡವೇ ಹೇಳಿಬಿಡಿ, ಹೋಗಿ ಎಂದರೆ ಎಲ್ಲರೂ ಹೊರಕ್ಕೆ ಹೋಗಿಬಿಡುತ್ತೇವೆ. ನಾನು ಹೇಳುತ್ತಿರುವುದೇ ಬೇರೆಯ ವಿಚಾರ, ಇಲ್ಲಿ ತೀರ್ಮಾನವಾಗಿರುವ ಹಾಗೆ ಪೀಠದಿಂದ ವರದಿಯನ್ನು ಮಂಡಿಸಬೇಕೆನ್ನುವ ಆದೇಶ ಆಗಿದೆ. ಈ ವರದಿಯನ್ನು ಮಂಡಿಸುವುದಕ್ಕೆ ಕಾನೂನು ಸಚಿವರು ಆಗಬೇಕೆಂದಿಲ್ಲ, ಮುಖ್ಯಮಂತ್ರಿಗಳಿದ್ದಾರೆ ಅವರೇ ಮಂಡಿಸಬಹುದು. ಅಥವಾ ಕಾನೂನು ಸಚಿವರು ಬಂದ ಮೇಲೆ ವರದಿಯನ್ನು ಮಂಡಿಸುತ್ತೇವೆ ಎಂದಾದರೂ ಸರ್ಕಾರ ಹೇಳಬೇಕು. ಯಾವುದನ್ನೂ ಸರಿಯಾಗಿ ಹೇಳುತ್ತಿಲ್ಲ. ಮುಖ್ಯಮಂತ್ರಿಗಳಿಗಿಂತ ಕಾನೂನು ಸಚಿವರು ದೊಡ್ಡವರೇ?

**(ಗೊಂದಲ)**

**ಶ್ರೀ ವಿ.ಎಸ್.ಉಗ್ರಪ್ಪ:–** ಮಾನ್ಯ ಸಭಾಪತಿಗಳೇ, ವಿರೋಧ ಪಕ್ಷದ ನಾಯಕರಾಗಿ ಅವರಿಗೆ ಸದನದ ನಿಯಮಗಳೇ ತಿಳಿದಿಲ್ಲ ಎಂದರೆ ಹೇಗೆ?

**(ಗೊಂದಲ)**

**ಉಪಸಭಾಪತಿಗಳು:–** ದಯಮಾಡಿ ಎಲ್ಲರೂ ಕುಳಿತುಕೊಳ್ಳಿ,

**ಶ್ರೀ ಪುಟ್ಟಣ್ಣ(ಶಿಕ್ಷಕರ ಕ್ಷೇತ್ರ):–** ಮಾನ್ಯ ಸಭಾಪತಿಗಳೇ, ಇತ್ತೀಚೆಗೆ ನಮಗೂ ಸಹ ಸದನದಲ್ಲಿ ಬೇಸರ ಆಗುತ್ತಿದೆ. ಅಜೆಂಡಾದಲ್ಲಿ ಪ್ರತಿಯೊಬ್ಬರ ವಿಷಯಗಳು ಬಂದಿರುತ್ತವೆ. ಈ ಕಡೆಯಿಂದ ವರದಿಯನ್ನು ಕೇಳಿದ್ದಕ್ಕೆ ಅದರ ಬಗ್ಗೆ 3 ಗಂಟೆಗೆ ಕಾನೂನು ಸಚಿವರಿಂದ ಹೇಳಿಸುವುದಾಗಿ ಸರ್ಕಾರ ಹೇಳಿದೆ. 3 ಗಂಟೆಗೆ ವರದಿಯನ್ನು ಮಂಡಿಸಲಿಲ್ಲ ಎಂದರೆ ಅವರು ಏನು ಬೇಕಾದರೂ ಮಾತನಾಡಿ, ಅಥವಾ 3 ಗಂಟೆಗೆ ಸರ್ಕಾರ ಏನು ಹೇಳುತ್ತದೆ ಅದರ ಮೇಲೆ ಮಾತನಾಡಿ, ಅದರ ಬಗ್ಗೆ ನಮ್ಮದೇನೂ ಅಭ್ಯಂತರವಿಲ್ಲ. ನಾವು ಸಹ ಅವರ ಬೆಂಬಲಕ್ಕೆ ನಿಲ್ಲುತ್ತೇವೆ. ಆ ವಿಚಾರದಲ್ಲಿ ಎರಡನೇ ಮಾತಿಲ್ಲ. ದಯಮಾಡಿ ಈಗ ಅಜೆಂಡಾ ಪ್ರಕಾರ ಪ್ರಶ್ನೋತ್ತರವನ್ನು ಮಾಡಿ, ತಮಗೆ ಕೈ ಮುಗಿದು ಕೇಳುತ್ತೇನೆ, ಮೊದಲಿಗೆ ಅಜೆಂಡಾವನ್ನು ಪೂರ್ತಿ ಮಾಡಿ. ನಾವು ಇದನ್ನೆಲ್ಲ ನೋಡಿಕೊಂಡು ಹೋಗುವುದಕ್ಕೆ ಬಂದಿಲ್ಲ. ನಾನು ವಿರೋಧ ಪಕ್ಷದ ನಾಯಕರಲ್ಲಿ ಮನವಿಯನ್ನು ಮಾಡುವುದೇನೆಂದರೆ ಸರ್ಕಾರ 3 ಗಂಟೆಗೆ ಹೇಳುವುದಾಗಿ ಹೇಳಿದ್ದಾರೆ, 3 ಗಂಟೆಯ ನಂತರ ಏನು ಫೈಟ್ ಮಾಡುತ್ತೀರಾ ಮಾಡಿ, ನಿಮ್ಮ ಜೊತೆಗೆ ನಾವು ಸಹ ಇರುತ್ತೇವೆ. ಈಗ ಮುಖ್ಯಮಂತ್ರಿಯವರೆ 3 ಗಂಟೆಗೆ ಕಾನೂನು ಸಚಿವರು ಬಂದು ಈ ಬಗ್ಗೆ ಹೇಳುತ್ತಾರೆಂದು ಹೇಳಿದ್ದಾರೆ. ದಯಮಾಡಿ ಅವರ ಮೇಲೆ ವಿಶ್ವಾಸವಿಡಿ, ಕಲಾಪವನ್ನು ಮುಂದುವರೆಸುವುದಕ್ಕೆ ಅವಕಾಶ ಮಾಡಿಕೊಡಿ.

**ಶ್ರೀ ಕೆ.ಬಿ.ಶಾಣಪ್ಪ(ನಾಮ ನಿರ್ದೇಶಿತರು):–** ಮಾನ್ಯ ಸಭಾಪತಿಗಳೇ, ನಾನು ಹೇಳುವುದು ಇಷ್ಟೆ, ಮುಖ್ಯಮಂತ್ರಿಗಳು ಹೇಳಿರುವ ವಿಚಾರದ ಬಗ್ಗೆ, we don't say that we don't believe it. ಸಭಾನಾಯಕರು ' ಕಾನೂನು ಸಚಿವರು ಬಂದ ನಂತರ ಅವರಿಂದ ಒಂದು ಹೇಳಿಕೆಯನ್ನು ಕೊಡಿಸುತ್ತೇವೆ' ಎನ್ನುವ ಮಾತನ್ನು ಹೇಳಿದರು. He has not said that we will put the report before the House. That is the contradiction here. If they are prepared to avoid the issue, then that is left to you. ಆದರೆ ಮುಖ್ಯಮಂತ್ರಿಗಳು ಈ ರೀತಿಯಲ್ಲಿಯೇ ಹೇಳಿದ್ದಾರೆ. ಉತ್ತರ ಕೊಡಿಸುವುದಾಗಿ ಹೇಳಿದ್ದಾರೆ, ಇಲ್ಲಿ ಉತ್ತರದ ಪ್ರಶ್ನೆ ಬಂದಿಲ್ಲ.

**ಶ್ರೀ ಎಸ್.ಆರ್.ಪಾಟೀಲ್(ಸಭಾನಾಯಕರು):–** ಕಾನೂನು ಸಚಿವರು ಬಂದು ವರದಿಯನ್ನು ಮಂಡಿಸುತ್ತಾರೆ ಎನ್ನುವ ಮಾತನ್ನು ಹೇಳಿರುವುದಿಲ್ಲ. ಈ ವಿಚಾರದಲ್ಲಿ ತಪ್ಪು ಕಲ್ಪನೆ ಬೇಡ, ನಾನು ಕೂಡ ಆ ರೀತಿ ಹೇಳಿಕೆ ನೀಡಿರುವುದಿಲ್ಲ. ಅವರು ಬಂದು ಈ ಬಗ್ಗೆ ಸೂಕ್ತ ನಿರ್ಣಯ ಕೈಗೊಳ್ಳುತ್ತಾರೆ ಎನ್ನುವ ಮಾತನ್ನು ಹೇಳುತ್ತಿದ್ದೇವೆ. ಇದಕ್ಕಿಂತ ಹೆಚ್ಚಿಗೆ ನಾನೇನು ಹೇಳುವುದಕ್ಕೆ ಹೋಗುವುದಿಲ್ಲ.

**(ಗೊಂದಲ)**

SRI K.B.SHANAPPA: Do you mean to say that we are fools. – ನಮ್ಮನ್ನೇನೂ ಹುಚ್ಚರು ಎಂದು ತಿಳಿದುಕೊಂಡಿದ್ದೀರಾ? ಸರ್ಕಾರದ ಮನಸ್ಸಿನಲ್ಲಿ ಏನಿದೆ ಎನ್ನುವುದು ನಮಗೆ ಗೊತ್ತಿಲ್ಲವೇ?

**ಉಪಸಭಾಪತಿಯವರು:–** ಎಲ್ಲರೂ ಕುಳಿತುಕೊಳ್ಳಿ. ಶಾಣಪ್ಪನವರೇ ಕುಳಿತುಕೊಳ್ಳಿ.

**SRI K.B.SHANAPPA**: Sir, you are not understanding me.

**(ಗೊಂದಲ)**

**ಶ್ರೀ ಗೋ.ಮಧುಸೂದನ್:–** ಮಾನ್ಯ ಸಭಾಪತಿಗಳೇ, ಇದೇ ಸಭಾಪತಿ ಪೀಠದಿಂದ ಮಾನ್ಯ ಸಭಾಪತಿಗಳು ಈ ವಿಚಾರದ ಬಗ್ಗೆ 3 ಬಾರಿ ರೂಲಿಂಗ್ ಅನ್ನು ನೀಡಿದ್ದಾರೆ.

**(ಗೊಂದಲ)**

**ಶ್ರೀ ಎಸ್.ಆರ್.ಪಾಟೀಲ್(ಸಭಾನಾಯಕರು):–** ಸದನದಲ್ಲಿ ಮಹತ್ವದ ವಿಚಾರಗಳ ಬಗ್ಗೆ ಚರ್ಚೆ ಆಗಬೇಕಾಗಿದೆ. ದಯಮಾಡಿ ಸದನದ ಅಮೂಲ್ಯವಾದ ಸಮಯವನ್ನು ಹಾಳು ಮಾಡುವುದಕ್ಕೆ ಅವಕಾಶ ನೀಡಬೇಡಿ.

**ಉಪಸಭಾಪತಿಯವರು:–** ದಯಮಾಡಿ ವಿರೋಧ ಪಕ್ಷದ ನಾಯಕರಿಗೆ ಹೇಳುವುದೇನೆಂದರೆ ತಾವು ಹಿರಿಯರಿದ್ದೀರಿ, ಈ ಸದನದ ವಿರೋಧ ಪಕ್ಷದ ನಾಯಕರಾಗಿದ್ದೀರಿ, ಈ ದಿನ ಸದನ ಪ್ರಾರಂಭ ಆದಾಗ ನೀವು ಯಾವುದೋ ಒಂದು ಮಹತ್ವದ ವಿಚಾರವನ್ನು ಪ್ರಸ್ತಾಪ ಮಾಡುತ್ತೀರೆಂದು ನಾನು ನಿಮಗೆ ಅವಕಾಶವನ್ನು ಮಾಡಿಕೊಟ್ಟೆನು. ನೀವು ಎತ್ತಿರತಕ್ಕ ಕ್ರಿಯಾಲೋಪಕ್ಕೆ ಮುಖ್ಯಮಂತ್ರಿಗಳು ಹಾಗೂ ಸಭಾನಾಯಕರು ಉತ್ತರ ನೀಡಿದ್ದಾರೆ. 3 ಗಂಟೆಗೆ ಕಾನೂನು ಸಚಿವರು ಬಂದು ಈ ವಿಚಾರದ ಬಗ್ಗೆ ತಮ್ಮ ನಿರ್ಣಯ ಹೇಳುತ್ತಾರೆಂದರೆ ನೀವು ಸದನ ನಡೆಸಲಿಕ್ಕೆ ಅವಕಾಶ ನೀಡದೇ ಒಂದು ಜವಾಬ್ದಾರಿ ಸ್ಥಾನದಲ್ಲಿರುವ ವಿರೋಧ ಪಕ್ಷದವರು ಈ ರೀತಿ ಮಾಡಿದಲ್ಲಿ ನಾನು ಯಾವ ರೀತಿಯಲ್ಲಿ ಈ ಸದನವನ್ನು ನಡೆಸಬೇಕೆಂದು ನೀವೇ ಹೇಳಿ. 3 ಗಂಟೆಗೆ ಬಂದು ಕಾನೂನು ಸಚಿವರು ಉತ್ತರ ನೀಡುವುದಾಗಿ ಹೇಳಿದರು ಸಹ ನೀವುಗಳು ಈ ವಿಚಾರವನ್ನು ಬಿಡದಿದ್ದರೆ ನಾನು ಯಾವ ರೀತಿ ಈ ಸದನವನ್ನು ನಡೆಸಬೇಕು. ಪ್ರಶ್ನೋತ್ತರಗಳು, ಹೊರಟ್ಟಿಯವರದು,

**(ಗೊಂದಲ)**

**(ಈ ಹಂತದಲ್ಲಿ ಭಾರತೀಯ ಜನತಾ ಪಕ್ಷದವರು ಸರ್ಕಾರದ ವಿರುದ್ಧ ಘೋಷಣೆ ಕೂಗುತ್ತಾ ಬಾವಿಯಲ್ಲಿ ಧರಣಿಗೆ ಬಂದರು.)**

**ಶ್ರೀ ರಾಮಚಂದ್ರಗೌಡ:–** ಮಾನ್ಯ ಸಭಾಪತಿಗಳೇ, ವರದಿಯನ್ನು ಮಂಡನೆ ಮಾಡುತ್ತೇವೆ ಎಂದು ಹೇಳಿದರೆ ಸಾಕು, ನಾವು ನಮ್ಮ ಧರಣಿ ಹಿಂದಕ್ಕೆ ಪಡೆಯುತ್ತೇವೆ.

**ಶ್ರೀ ಎಸ್.ಆರ್.ಪಾಟೀಲ್(ಸಭಾನಾಯಕರು):–** ನೀವು ಹೇಳಿದ ಹಾಗೆ ಕೇಳುವುದಕ್ಕೆ ನಾವು ಇಲ್ಲಿಲ್ಲ. ಇದೇ ರೀತಿ ಹೇಳಬೇಕೆಂದು ನಮಗೆ ನೀವು ಡಿಕ್ಟೇಕ್ಟ್ ಮಾಡುತ್ತೀರಾ? ಮಾನ್ಯ ಸಭಾಪತಿಗಳೇ, ಇವರು ಸರ್ಕಾರಕ್ಕೆ ಡಿಕ್ಟೇಕ್ಟ್ ಮಾಡುತ್ತಿದ್ದಾರೆ. ಇದೇ ರೀತಿ ಹೇಳಬೇಕೆಂದು ಹೇಳುತ್ತಿದ್ದಾರೆ. Have they got right?

**(ಗೊಂದಲ)**

**SRI G.MADHUSUDAN**: Shame....

**SRI S.R.PATIL**: How much respect you are giving to the Chair, I know.

**ಶ್ರೀ ರಾಮಚಂದ್ರಗೌಡ:–** ಮಾನ್ಯ ಸಭಾಪತಿಗಳು ಹಿಂದೆ ವರದಿಯನ್ನು ಮಂಡಿಸಬೇಕೆಂದು ಹೇಳಿದ್ದರು ಸಹ ಆಡಳಿತ ಪಕ್ಷದವರು ಮಂಡನೆ ಮಾಡುವುದಾಗಿ ಸಹ ಹೇಳಿಕೆ ನೀಡುತ್ತಿಲ್ಲ.

**SRI S.R.PATIL**: One who preach morality should practice morality ನೀತಿ ಹೇಳುವವರು ಮೊದಲು ನೀತಿವಂತರಾಗಬೇಕು ನಿಮ್ಮಲ್ಲಿ ನೀತಿ ಎಲ್ಲಿದೆ.

**ಉಪಸಭಾಪತಿಯವರು:–** ಸದನದ ಬಾವಿಯಲ್ಲಿ ನಿಂತು ಮಾತನಾಡುವುದು ಸರಿಯಲ್ಲ ಅಲದಲಿ ಮಾತನಾಡುವುದು ಯಾವುದೂ ಕಡತಕ್ಕೆ ಹೋಗುವುದಿಲ್ಲ.

**(ಗೊಂದಲ)**

**ಶ್ರೀ ಗೋ.ಮಧುಸೂದನ್:–** 15 ಲಕ್ಷ ಕೋಟಿ ರೂ.ಗಳ ಲೂಟಿ ಮಾಡಿದ್ದಾರೆ.

(ಗೊಂದಲ)

**ಉಪ ಸಭಾಪತಿಯವರು:–** ಮಧುಸೂದನ್‌ರವರು ಮಾತನಾಡಿರುವುದು ಯಾವುದು ಕಡತಕ್ಕೆ ಹೋಗುವುದಿಲ್ಲ.

**(ಗೊಂದಲ)**

**ಶ್ರೀ ಎಸ್.ಆರ್.ಪಾಟೀಲ್ (ಸಭಾನಾಯಕರು):–** ಸಭಾಪತಿಯವರೆ, don't allow him to hijack this House.

**ಉಪ ಸಭಾಪತಿಯವರು:–** ಪೀಠವನ್ನು ಧಿಕ್ಕರಿಸಿ ಮಾತನಾಡುತ್ತಿದ್ದಿರಿ, ಕ್ರಮ ತೆಗೆದುಕೊಳ್ಳಬೇಕಾಗುತ್ತದೆ. ದಯಮಾಡಿ ಮಾತನಾಡಬೇಡಿ. ಕುಳಿತುಕೊಳ್ಳಿ.

**ಶ್ರೀ ಕೆ.ಎಸ್.ಈಶ್ವರಪ್ಪ(ವಿರೋಧ ಪಕ್ಷದ ನಾಯಕರು):–**ಮಾನ್ಯ ಸಭಾಪತಿಗಳೆ, ನಾವು ಪೀಠಕ್ಕೆ ಗೌರವ ಕೊಡುತ್ತಿದ್ದೆವೆ. ನಿಮ್ಮ ರೂಲಿಂಗ್‌ನ್ನು ಅವರು ಪರಿಪಾಲನೆ ಮಾಡುತ್ತಿಲ್ಲ. ನಿಮ್ಮ ಪರವಾಗಿ ನಾವು ನಿಂತಿದ್ದೆವೆ.

**(ಗೊಂದಲ)**

**ಶ್ರೀ ರಾಮಚಂದ್ರಗೌಡ:–** ಅಧ್ಯಕ್ಷರ ರೂಲಿಂಗ್‌ಗೆ ಗೌರವವಿಲ್ಲವೆ? ವರದಿಯನ್ನು ಮಂಡನೆ ಮಾಡುತ್ತೇವೆ ಎಂದು ಹೇಳಿಬಿಡಲಿ ಸರ್ಕಾರ.

**(ಗೊಂದಲ)**

**ಶ್ರೀ ವಿ.ಎಸ್.ಉಗ್ರಪ್ಪ:–** ನಾಗರಹೊಳೆಯಲ್ಲಿ ಜಮೀನು ಹೊಡೆದಿರುವ ಮಧುಸೂದನ್ ಇವತ್ತು ಇಷ್ಟು ಮಾತನಾಡುತ್ತಿದ್ದಾರೆ.

**(ಗೊಂದಲ)**

**ಶ್ರೀ ಕೆ.ಎಸ್.ಈಶ್ವರಪ್ಪ:–** ನಿಮ್ಮ ಪರವಾಗಿ ನಾವು ಬಂದಿದ್ದೆವೆ. ನಿಮ್ಮ ರೂಲಿಂಗ್‌ನ್ನು ಮೀರುತ್ತಿದ್ದಾರೆ.

**(ಗೊಂದಲ)**

ಶ್ರೀ ಆರ್.ವಿ.ವೆಂಕಟೇಶ್:– ಸಾವಿರಾರು ಕೋಟಿ ರೂಪಾಯಿಗಳ ಲೂಟಿ ಮಾಡಿ ಇವತ್ತು ಈ ಪರಿಸ್ಥಿತಿ ಬಂದಿದೆ ನಿಮಗೆ. ನಾಚಿಕೆಯಾಗಬೇಕು ನಿಮಗೆ.

**ಉಪಸಭಾಪತಿಯವರು:–** ದಯಮಾಡಿ ಎಲ್ಲರೂ ಕುಳಿತುಕೊಳ್ಳಿ.

**(ಗೊಂದಲ)**

**ಶ್ರೀ ಎಸ್.ಆರ್.ಪಾಟೀಲ್:–** ಸದನವನ್ನು Hijack ಮಾಡಲು ಬಿಡಬೇಡಿ. ಸದನದಲ್ಲಿ ಕಲಾಪಗಳು ನಡೆಯಲಿ. Don't allow them to hijack this House.

**ಶ್ರೀ ರಾಮಚಂದ್ರಗೌಡ:–** ವರದಿ ಮಂಡಿಸುತ್ತೇವೆ ಎಂದು ಹೇಳಿ.

**(ಗೊಂದಲ)**

**ಶ್ರೀ ಎಸ್.ಆರ್.ಪಾಟೀಲ್:–** ಕಾನೂನು ಸಚಿವರು ಬಂದಮೇಲೆ ಉತ್ತರ ಕೊಡುತ್ತಾರೆ.

**(ಗೊಂದಲ)**

**ಶ್ರೀ ರಾಮಚಂದ್ರಗೌಡ:–** ನೀವು ಉತ್ತರ ಏನು ಕೊಡುವುದು? ವರದಿ ಮಂಡನೆ ಮಾಡಬೇಕು ಅಷ್ಟೆ. Place it.

**SRI S.R.PATIL**: You cannot dictate terms to the Government. ನೀವು ಹೀಗೆ ಮಾಡಿ ಎಂದು ಹೇಳುವ ಹಕ್ಕು ನಿಮಗೆ ಇಲ್ಲ. ನೀವು ಬಹಳ ಹಿರಿಯರು, ಅನುಭವವಿರುವವರು. You cannot dictate the Government. Whatever we have said, that is final. We don't want to tell anything more than what we have said already.

**(ಗೊಂದಲ)**

**ಶ್ರೀ ರಾಮಚಂದ್ರಗೌಡ:–** ವರದಿಯನ್ನು ಮಂಡನೆ ಮಾಡಲು ಏನು ಮಾತನಾಡುವುದು ಇದೆ? What is that they want to talk?

**(ಗೊಂದಲ)**

**ಶ್ರೀ ಆರ್.ವಿ.ವೆಂಕಟೇಶ್:–** ಇದಕ್ಕೆ ದಯಮಾಡಿ ಅವಕಾಶ ಮಾಡಿಕೊಡಬೇಡಿ. ಸದನವನ್ನು ನಡೆಸಿ, ಪ್ರಶ್ನೋತ್ತರ ತೆಗೆದುಕೊಳ್ಳಿ. ಇವರು ಪ್ರತಿದಿನ ಈ ರೀತಿ ಸದನವನ್ನು ಹೈಜಾಕ್ ಮಾಡುತ್ತಿದ್ದಾರೆ. ಕೇವಲ ಪ್ರಚಾರಕ್ಕೆ ಸಿಮೀತವಾಗಿ ನಡೆದುಕೊಳ್ಳುತ್ತಿದ್ದಾರೆ. ಇದು ಆಗಬಾರದು, ದಯಮಾಡಿ ಇವತ್ತಿನ ಅಜೆಂಡಾ ತೆಗೆದುಕೊಳ್ಳಬೇಕು. ಬಹಳಷ್ಟು ಸಮಸ್ಯೆಗಳ ಬಗ್ಗೆ ಎಲ್ಲರೂ ಪ್ರಶ್ನೆಗಳನ್ನು ಕೇಳಿದ್ದಾರೆ.

**(ಗೊಂದಲ)**

**ಉಪಸಭಾಪತಿಯವರು:–** ದಯಮಾಡಿ ಎಲ್ಲರೂ ಕುಳಿತುಕೊಳ್ಳಿ, ದಯಮಾಡಿ ವಿರೋಧ ಪಕ್ಷದ ನಾಯಕರಲ್ಲಿ ಮತ್ತು ಎಲ್ಲರಲ್ಲಿ ವಿನಂತಿ ಮಾಡಿಕೊಳ್ಳುತ್ತೇನೆ, ಮಾನ್ಯ ಕಾನೂನು ಸಚಿವರು ಮೂರು ಗಂಟೆಗೆ ಬರುತ್ತಾರೆ ಆಗ ಅವರ ಅಭಿಪ್ರಾಯವನ್ನು ಮಂಡಿಸುತ್ತಾರೆ ಎಂದು ಮಾನ್ಯ ಮುಖ್ಯಮಂತ್ರಿಗಳು ಮತ್ತು ಸಭಾನಾಯಕರು ಈಗಾಗಲೆ ಹೇಳಿದ್ದಾರೆ.

**ಶ್ರೀ ಕೆ.ಎಸ್.ಈಶ್ವರಪ್ಪ:–** ಅಭಿಪ್ರಾಯವನ್ನು ವ್ಯಕ್ತಪಡಿಸುವುದಕ್ಕೆ ಏನು ಇದೆ, ವರದಿಯನ್ನು ಮಂಡಿಸಲಿ.

**ಉಪಸಭಾಪತಿಯವರು:–** ಮಾನ್ಯ ವಿರೋಧ ಪಕ್ಷದ ನಾಯಕರೆ ತಾವು ಅನುಭವವುಳ್ಳವರು, ಸರ್ಕಾರಕ್ಕೆ ಹೀಗೆ ಮಾಡಬೇಕು, ಹಾಗೆ ಮಾಡಬೇಕು ಎಂದು ಹೇಳಲು ಯಾರಿಗೆ ಅಧಿಕಾರವಿಲ್ಲ.

**(ಗೊಂದಲ)**

**ಉಪಸಭಾಪತಿಯವರು:–** ಮೂರು ಗಂಟೆಗೆ ಸದನದಕ್ಕೆ ಬಂದು ತಮ್ಮ ಸಮಸ್ಯೆ ಬಗ್ಗೆ ಮಾತನಾಡುತ್ತಾರೆ ಎಂದು ಸ್ಪಷ್ಟವಾಗಿ ಹೇಳಿದ್ದಾರೆ.

**ಶ್ರೀ ಕೆ.ಎಸ್.ಈಶ್ವರಪ್ಪ:–** ಮೂರು ಗಂಟೆಗೆ ಬಂದು ವರದಿ ಮಂಡಿಸುತ್ತಾರೆಯೇ? ಲೂಟಿ ಮಾಡಿದವರಿಗೆ ನೀವು ಸಹಕಾರವನ್ನು ಕೊಡುತ್ತೀರಾ?

**(ಗೊಂದಲ)**

**ಶ್ರೀ ಎಸ್.ಆರ್.ಪಾಟೀಲ್:–** ನೀವು ಅಸಹಕಾರ ತೋರಿಸಿರುವುದರಿಂದಲೇ ನಿಮ್ಮನ್ನು ಅಲ್ಲಿ ಕೂಡಿಸಿದ್ದಾರೆ.

**(ಗೊಂದಲ)**

**ಶ್ರಿ ವಿ.ಎಸ್.ಉಗ್ರಪ್ಪ:** ಮಾನ್ಯ ಅಧ್ಯಕ್ಷರೆ, ..

**ಉಪಸಭಾಪತಿಯವರು:–** ಉಗ್ರಪ್ಪನವರೆ, ಬೇಡಿ, ದಯವಿಟ್ಟು,

**ಉಪಸಭಾಪತಿಯವರು:–** ಮಾನ್ಯ ವಿರೋಧ ಪಕ್ಷದ ನಾಯಕರೆ, ಮೂರು ಗಂಟೆಗೆ ನಾನು ಅವಕಾಶ ಮಾಡಿಕೊಡುತ್ತೇನೆ.

**ಶ್ರೀ ಕೆ.ಎಸ್.ಈಶ್ವರಪ್ಪ:–** ವರದಿ ಮಂಡಿಸುತ್ತೇವೆ ಎಂದು ಹೇಳಬೇಕು. ಇಲ್ಲದಿದ್ದರೆ ಸದನದಲ್ಲಿ ವರದಿ ಮಂಡಿಸುವ ಅಧಿಕಾರ ನನಗೆ ಇಲ್ಲ ಎಂದು ಮುಖ್ಯಮಂತ್ರಿಗಳು ಹೇಳಲಿ.

**(ಗೊಂದಲ)**

**ಉಪಸಭಾಪತಿಯವರು:–** ಮೂರು ಗಂಟೆಗೆ ಖಂಡಿತವಾಗಿ ಮಾತನಾಡಲು ಅವಕಾಶ ಕಲ್ಪಿಸಿಕೊಡುತ್ತೇನೆ.

**ಶ್ರೀ ಕೆ.ಎಸ್.ಈಶ್ವರಪ್ಪ:–** ವರದಿ ಮಂಡಿಸಲು ಸೂಚನೆ ಕೊಡುತ್ತೀರಾ? ಆ ಆಶ್ವಾಸನೆ ಕೊಡುತ್ತೀರಾ?

**(ಗೊಂದಲ)**

**ಉಪಸಭಾಪತಿಯವರು:–** ಅದು ಸರ್ಕಾರಕ್ಕೆ ಬಿಟ್ಟ ವಿಚಾರ.

**(ಗೊಂದಲ)**

**ಶ್ರೀ ರಾಮಚಂದ್ರಗೌಡ:–** ಮೂರು ಗಂಟೆಗೆ ವರದಿಯನ್ನು ಮಂಡನೆ ಮಾಡುತ್ತೇವೆ ಎಂದು ಸರ್ಕಾರ ಹೇಳಿಬಿಡಲಿ.

**ಉಪಸಭಾಪತಿಯವರು:–** ಸದನವನ್ನು 15 ನಿಮಿಷಗಳ ಕಾಲ ಮುಂದೂಡಲಾಗಿದೆ.

(ಸದವನ್ನು 15 ನಿಮಿಷಗಳ ಕಾಲ ಮುಂದೂಡಲಾಯಿತು)

**ಉಪ ಸಭಾಪತಿಯವರು:–** ಈಗ ಸಭೆಯು ಮುಕ್ತಾಯವಾಗಿ ನಾಳೆ ಬೆಳಿಗ್ಗೆ 10.00 ಗಂಟೆಗೆ ಸೇರುವುದು.

**(ಸದನವು ರಾತ್ರಿ 9 ಗಂಟೆ 10 ನಿಮಿಷಕ್ಕೆ ಮುಕ್ತಾಯಗೊಂಡು ಪುನಃ ದಿನಾಂಕ: 24ನೇ ಮಾರ್ಚ್ ಮಾಹೆ 2016ರ ಗುರುವಾರದಂದು ಬೆಳಿಗ್ಗೆ 10.00 ಗಂಟೆಗೆ ಸೇರಲು ನಿಶ್ಚಯಿಸಿತು)**

ಯಾರಿಗೂ ಕೂಡ ಯಾವ ಹುದ್ದೆಗಳು ಕೂಡ ಶಾಶ್ವತವಲ್ಲ, ಇವತ್ತು ಆಡಳಿತ ಪಕ್ಷದಲ್ಲಿರುವವರು ವಿರೋಧ ಪಕ್ಷದ ಸ್ಥಾನಕ್ಕೆ ಬರಬಹುದು; ವಿರೋಧ ಪಕ್ಷದಲ್ಲಿರುವವರು ಆಡಳಿತ ಸ್ಥಾನಕ್ಕೆ ಬರಹುದು. ಆದರೆ ಸಂಸದೀಯ ವ್ಯವಸ್ಥೆಯಲ್ಲಿ ನಾವು ಈ ಸದನವನ್ನು ಉಪಯೋಗ ಮಾಡಬೇಕು, ಜನರ ಒಳಿತಿಗಾಗಿ ಅದನ್ನು ಬಳಸಬೇಕು. ದಯವಿಟ್ಟು ಪ್ರಶ್ನೋತ್ತರ ವೇಳೆಗೆ ಅವಕಾಶ ಮಾಡಿಕೊಡಿ. ಮಧ್ಯಾಹ್ನ 3:30 ಗಂಟೆಯ ನಂತರ ನಿಮ್ಮ ವಿಚಾರಕ್ಕೆ ನಾನು ಅವಕಾಶ ಕೊಡುತ್ತೇನೆ. ದಯವಿಟ್ಟು ಎಲ್ಲರೂ ತಮ್ಮ ತಮ್ಮ ಸ್ಥಾನಗಳಿಗೆ ಬನ್ನಿ. ಸನ್ಮಾನ್ಯ ಬಸವರಾಜ ಹೊರಟ್ಟಿಯವರು ಸಹ ಈಗಾಗಲೇ ಆ ವಿಚಾರವನ್ನು ಪ್ರಸ್ತಾಪ ಮಾಡಿದ್ದಾರೆ. ನಾನು ತಮ್ಮಲ್ಲಿ ವಿನಂತಿ ಮಾಡುತ್ತೇನೆ, ದಯಮಾಡಿ ಅವಕಾಶ ಮಾಡಿ.

**ಶ್ರೀ ಕೆ.ಎಸ್.ಈಶ್ವರಪ್ಪ(ವಿರೋಧ ಪಕ್ಷದ ನಾಯಕರು):–** ಮಾನ್ಯ ಸಭಾಪತಿಯವರೇ, ದಯಮಾಡಿ ಒಂದು ನಿಮಿಷ ನನಗೆ ಮಾತನಾಡಲು ಅವಕಾಶ ಮಾಡಿಕೊಡಿ.

**ಉಪ ಸಭಾಪತಿಯವರು:–** ಈಗ ಬೇರೆ ಚರ್ಚೆ ಬೇಡ.

**ಶ್ರೀ ಕೆ.ಎಸ್.ಈಶ್ವರಪ್ಪ(ವಿರೋಧ ಪಕ್ಷದ ನಾಯಕರು):–** ಮಾನ್ಯ ಸಭಾಪತಿಯವರೇ, ತಾವು ನನಗೆ ಮಾತನಾಡಲು ಅವಕಾಶ ಕೊಡುವುದಾಗಿ ತಿಳಿಸಿದ್ದಿರಿ.

**ಉಪ ಸಭಾಪತಿಯವರು:–** ಈಗ ಬೇರೆ ಚರ್ಚೆ ಬೇಡ.

**ಶ್ರೀ ಕೆ.ಎಸ್.ಈಶ್ವರಪ್ಪ(ವಿರೋಧ ಪಕ್ಷದ ನಾಯಕರು):–** ಮಾನ್ಯ ಸಭಾಪತಿಯವರೇ, ನನಗೆ ಮಾತನಾಡಲು ಅವಕಾಶ ಕೊಡುವುದಿಲ್ಲವೆ?

**ಉಪ ಸಭಾಪತಿಯವರು:–** ಇಲ್ಲ, ಈಗ ಬೇರೆ ಚರ್ಚೆ ಬೇಡ. ದಯಮಾಡಿ ಧರಣಿ ನಡೆಸುತ್ತಿರುವ ಸದಸ್ಯರು ತಮ್ಮ ಸ್ಥಾನಗಳಿಗೆ ವಾಪಸ್ ಬನ್ನಿ.

(ಗೊಂದಲ)

**ಶ್ರೀ ಕೆ.ಎಸ್.ಈಶ್ವರಪ್ಪ(ವಿರೋಧ ಪಕ್ಷದ ನಾಯಕರು):–** ಮಾನ್ಯ ಸಭಾಪತಿಯವರೇ, ತಾವು ನನಗೆ ಮಾತನಾಡಲು ಅವಕಾಶ ಕೊಡುವುದಾಗಿ ತಿಳಿಸಿದ್ದಿರಿ. ದಯವಿಟ್ಟು ನನಗೆ ಒಂದು ನಿಮಿಷ ಅವಕಾಶ ಮಾಡಿಕೊಡಿ.

**ಉಪ ಸಭಾಪತಿಯವರು:–** ಆಯಿತು, ಮಾತನಾಡಿ.

**ಶ್ರೀ ಕೆ.ಎಸ್.ಈಶ್ವರಪ್ಪ(ವಿರೋಧ ಪಕ್ಷದ ನಾಯಕರು):–** ಮಾನ್ಯ ಸಭಾಪತಿಯವರೇ, ಮಾನ್ಯ ಮುಖ್ಯಮಂತ್ರಿಯವರು ಹೇಳಿದ ಮಾತನ್ನು ನಾನು ಪೂರ್ಣವಾಗಿ ಕೇಳಿದೆ. ಅವರು ಏನು ಹೇಳಿದರೆಂದರೆ, ರೂಲಿಂಗ್ ಕೊಟ್ಟಿದ್ದಾರೆ, ರೂಲಿಂಗ್ ಕೊಟ್ಟಿದ್ದನ್ನು ಮಾನ್ಯ ಕಾನೂನು ಸಚಿವರು ಉಳಿದಂತಹ ಅಡ್ವೋಕೇಟ್ ಜನರಲ್‌ರವರ ಹತ್ತಿರ ಮತ್ತು ಬೇರೆ ಬೇರೆಯವರ ಹತ್ತಿರ ಚರ್ಚೆ ಮಾಡುತ್ತಿದ್ದಾರೆ, ಚರ್ಚೆ ಮಾಡಿದ ನಂತರ ಅವರೇ ಬಂದು ಸದನದಲ್ಲಿ ಉತ್ತರ ಕೊಡುತ್ತಾರೆ ಎನ್ನುವಂತಹ ಮಾತನ್ನು ತಿಳಿಸಿದ್ದಾರೆ. ರೂಲಿಂಗ್ ಕೊಡುವುದಕ್ಕೆ ಮುಂಚೆ, ಮಾನ್ಯ ಸಭಾಪತಿಗಳ ಪೀಠದಿಂದ ರೂಲಿಂಗ್ ಕೊಡುವುದಕ್ಕೆ ಮುಂಚೆ ಮಾನ್ಯ ಕಾನೂನು ಸಚಿವರು, ಸನ್ಮಾನ್ಯ ಸಭಾನಾಯಕರು ಹೇಳಿದ್ದನ್ನೂ ಕೇಳಿದರು; ನಾವು ಹೇಳಿದ್ದನ್ನೂ ಕೇಳಿದರು.

**ಉಪ ಸಭಾಪತಿಯವರು:–** ಈಗ ಆ ವಿಚಾರ ಏಕೆ?

**ಶ್ರೀ ಕೆ.ಎಸ್.ಈಶ್ವರಪ್ಪ(ವಿರೋಧ ಪಕ್ಷದ ನಾಯಕರು):–** ಮಾನ್ಯ ಸಭಾಪತಿಯವರೇ, ನಾವು ಹೇಳುವುದನ್ನು ತಾವು ಕೇಳುವುದಿಲ್ಲವೆ?

(ಗೊಂದಲ)

**ಶ್ರೀ ಎಸ್.ಆರ್.ಪಾಟೀಲ್(ಸಭಾನಾಯಕರು):–** ಮಾನ್ಯ ಸಭಾಪತಿಯವರೇ, ಎಷ್ಟು ಸಲ ಇದನ್ನು ಚರ್ಚೆ ಮಾಡುವುದು?

**ಉಪ ಸಭಾಪತಿಯವರು:–** ಮಾನ್ಯ ವಿರೋಧ ಪಕ್ಷದ ನಾಯಕರೇ, ನಾನು ತಮ್ಮಲ್ಲಿ ವಿನಂತಿ ಮಾಡುತ್ತೇನೆ.

**ಶ್ರೀ ಕೆ.ಎಸ್.ಈಶ್ವರಪ್ಪ(ವಿರೋಧ ಪಕ್ಷದ ನಾಯಕರು):–** ಮಾನ್ಯ ಸಭಾಪತಿಯವರೇ, ನಾನು ಹೇಳುವುದನ್ನು ತಾವು ಕೇಳುವುದಿಲ್ಲವೆ? ನಾನು ಹೇಳುವುದನ್ನು ಕೇಳುವುದಕ್ಕೆ ತಮಗೆ ಇಷ್ಟವಿದೆಯೊ, ಇಲ್ಲವೊ?

**ಉಪ ಸಭಾಪತಿಯವರು:–** ಈಗ ಹಿಂದಿನ ವಿಚಾರ ಬೇಡ. ದಯಮಾಡಿ ತಮ್ಮಲ್ಲಿ ವಿನಂತಿ ಮಾಡುತ್ತೇನೆ.

**ಶ್ರೀ ಕೆ.ಎಸ್.ಈಶ್ವರಪ್ಪ(ವಿರೋಧ ಪಕ್ಷದ ನಾಯಕರು):–** ಮಾನ್ಯ ಸಭಾಪತಿಯವರೇ, ನಮ್ಮ ಹಕ್ಕನ್ನು ಏಕೆ ಕಸಿದುಕೊಳ್ಳುತ್ತೀರಿ? ದಯಮಾಡಿ ಒಂದು ನಿಮಿಷ ನನಗೆ ಮಾತನಾಡಲು ಅವಕಾಶ ಕೊಡಿ ಸ್ವಾಮಿ, ನಾನು ಹೇಳುವುದನ್ನು ಒಂದು ನಿಮಿಷ ಕೇಳಿ ಸ್ವಾಮಿ.

**ಉಪ ಸಭಾಪತಿಯವರು:–** ಮಧ್ಯಾಹ್ನ 3:00 ಗಂಟೆಗೆ ನಾನು ಚರ್ಚೆಗೆ ಅವಕಾಶ ಕೊಡುತ್ತೇನೆ ಎಂದು ಹೇಳುತ್ತಿದ್ದೇನಲ್ಲವೆ.

**ಶ್ರೀ ಕೆ.ಎಸ್.ಈಶ್ವರಪ್ಪ(ವಿರೋಧ ಪಕ್ಷದ ನಾಯಕರು):–** ಮಾನ್ಯ ಸಭಾಪತಿಯವರೇ, ಅದಲ್ಲ. ಈಗ ಕಾನೂನು ಸಚಿವರ ಮಾತು, ನಮ್ಮ ಮಾತು ಎಲ್ಲವನ್ನೂ ಕೇಳಿ ಅನಂತರ ಮಾನ್ಯ ಸಭಾಪತಿಯವರು ತಜ್ಞರ ಅಭಿಪ್ರಾಯವನ್ನು ಕೇಳಿ ರೂಲಿಂಗ್ ಕೊಟ್ಟಾಗಿದೆ.

**ಉಪ ಸಭಾಪತಿಯವರು:–** ಕಾನೂನು ಸಚಿವರು ಬಂದಾಗ ...

(ಗೊಂದಲ)

**ಶ್ರೀ ಕೆ.ಎಸ್.ಈಶ್ವರಪ್ಪ(ವಿರೋಧ ಪಕ್ಷದ ನಾಯಕರು):–** ಮಾನ್ಯ ಉಪ ಸಭಾಪತಿಯವರೇ, ಮಾನ್ಯ ಸಭಾಪತಿಯವರು ತಜ್ಞರ ಅಭಿಪ್ರಾಯವನ್ನು ಕೇಳಿ ರೂಲಿಂಗ್ ಕೊಟ್ಟಾಗಿದೆ. ಆ ರೂಲಿಂಗ್ ಮೇಲೆ ಮತ್ತೆ ಮಾನ್ಯ ಕಾನೂನು ಸಚಿವರು ಬೇರೆ ಬೇರೆ ತಜ್ಞರ ಬಳಿ ಅಭಿಪ್ರಾಯವನ್ನು ತೆಗೆದುಕೊಳ್ಳುವ ಅವಕಾಶ ಇಲ್ಲ. ಆ ರೂಲಿಂಗ್‌ನ್ನು ಸರ್ಕಾರ ಈಗ ಪರಿಪಾಲನೆ ಮಾಡಬೇಕಷ್ಟೆ. ಆ ರೀತಿ ಅವರು ಆ ನಿರ್ಣಯವನ್ನು ಪರಿಪಾಲನೆ ಮಾಡಿ ವರದಿಯನ್ನು ಮಂಡಿಸುವುದನ್ನು ಬಿಟ್ಟು ಮಾನ್ಯ ಮುಖ್ಯಮಂತ್ರಿಯವರು ಸದನವನ್ನು ದಾರಿ ತಪ್ಪಿಸುತ್ತಿದ್ದಾರೆ. ಇದು ಯಾವ ನ್ಯಾಯ?

**ಉಪ ಸಭಾಪತಿಯವರು:–** ಮಾನ್ಯ ವಿರೋಧ ಪಕ್ಷದ ನಾಯಕರೇ, ದಯಮಾಡಿ ...

**ಶ್ರೀ ಕೆ.ಎಸ್.ಈಶ್ವರಪ್ಪ(ವಿರೋಧ ಪಕ್ಷದ ನಾಯಕರು):–** ಸನ್ಮಾನ್ಯ ಸಭಾಪತಿಯವರೇ, ಮಾನ್ಯ ಮುಖ್ಯಮಂತ್ರಿಗಳಿಗೆ ಆ ವರದಿಯನ್ನು ಸದನದಲ್ಲಿ ಮಂಡನೆ ಮಾಡಿಸುವ ದಿಕ್ಕಿನಲ್ಲಿ ಆಸಕ್ತಿ ಇಲ್ಲ. ಮಾನ್ಯ ಮುಖ್ಯಮಂತ್ರಿಗಳ ಆಸಕ್ತಿ ಏನು?

**ಉಪ ಸಭಾಪತಿಯವರು:–** ದಯಮಾಡಿ ಕಾನೂನು ಸಚಿವರು ನಮ್ಮ ಸದನಕ್ಕೆ ಬಂದಾಗ ... Please, ಮಾನ್ಯ ವಿರೋಧ ಪಕ್ಷದ ನಾಯಕರೇ, ... ವಿರೋಧ ಪಕ್ಷದ ನಾಯಕರೇ, ... ವಿರೋಧ ಪಕ್ಷದ ನಾಯಕರೇ ...

**ಶ್ರೀ ಕೆ.ಎಸ್.ಈಶ್ವರಪ್ಪ(ವಿರೋಧ ಪಕ್ಷದ ನಾಯಕರು):–** ಸನ್ಮಾನ್ಯ ಸಭಾಪತಿಯವರೇ, ಮಾನ್ಯ ಮುಖ್ಯಮಂತ್ರಿಗಳ ಆಸಕ್ತಿ ಏನು? ಈ ರೀತಿ ಯಾರು 57 ಸಾವಿರ ಎಕರೆ, 15 ಲಕ್ಷ ಕೋಟಿ ಅನ್ಯಾಯವಾಗಿ ಭ್ರಷ್ಟಾಚಾರ ನಡೆದಿದೆ, ಆ ಭ್ರಷ್ಟರನ್ನು ರಕ್ಷಣೆ ಮಾಡುವಂತಹ ದಿಕ್ಕಿನಲ್ಲಿ ಮುಖ್ಯಮಂತ್ರಿಗಳು ಆಸಕ್ತಿ ವಹಿಸುತ್ತಿದ್ದಾರೆ.

**ಶ್ರೀ ಎಸ್.ಆರ್.ಪಾಟೀಲ್(ಸಭಾನಾಯಕರು):–** ಮಾನ್ಯ ಸಭಾಪತಿಯವರೇ, ಮಾನ್ಯ ವಿರೋಧ ಪಕ್ಷದ ನಾಯಕರು ಅನವಶ್ಯಕವಾಗಿ ಮಾತನಾಡುತ್ತಿದ್ದಾರೆ.

**ಉಪ ಸಭಾಪತಿಯವರು:–** ಈಗ ಸದನವನ್ನು 10 ನಿಮಿಷಗಳ ಕಾಲ ಮುಂದೂಡಲಾಗಿದೆ.

**(ಮಧ್ಯಾಹ್ನ 12 ಗಂಟೆ 3 ನಿಮಿಷದಿಂದ 10 ನಿಮಿಷಗಳ ಕಾಲ ಮುಂದೂಡಲಾಯಿತು)**

**( ಸದನವು ಪುನಃ 12ಗಂಟೆ 30 ನಿಮಿಷಕ್ಕೆ ಪುನ: ಸಮಾವೇಶಗೊಂಡಿತು, ಮಾನ್ಯ ಉಪಸಭಾಪತಿಗಳು ಪೀಠವನ್ನು ಅಲಂಕರಿಸಿದರು)**

( ಈ ಹಂತದಲ್ಲಿ ಬಿಜೆಪಿ ಸದಸ್ಯರು ಬಾವಿಗೆ ಬಂದು ಧರಣಿಯನ್ನು ಮುಂದುವರೆಸಿದರು)

**ಶ್ರೀ ಕೆ.ಎಸ್.ಈಶ್ವರಪ್ಪ(ವಿರೋಧ ಪಕ್ಷದ ನಾಯಕರು)**:– ಮಾನ್ಯ ಸಭಾಪತಿಗಳೆ, ಸರ್ಕಾರ ನಿಮ್ಮ ಮಾತನ್ನು ಮೀರುತ್ತಿದೆ. ನಿಮ್ಮ ರೂಲಿಂಗ್‌ನ್ನು ಮೀರುತ್ತಿದೆ.

**ಉಪಸಭಾಪತಿಯವರು**:– ಮಾನ್ಯ ವಿರೋಧ ಪಕ್ಷದ ನಾಯಕರಲ್ಲಿ ವಿನಂತಿ ಮಾಡಿಕೊಳ್ಳುವುದೇನೆಂದರೆ, Business Advisory Committee meeting ನಲ್ಲಿ ಸದನ ಸಾಮಾನ್ಯವಾಗಿ 11ಗಂಟೆಗೆ ಪ್ರಾರಂಭವಾಗುತ್ತಿತ್ತು. ಆದರೆ ಇನ್ನು ಮುಂದೆ ಸದನವನ್ನು 10 ಗಂಟೆಗೆ ಪ್ರಾರಂಭ ಮಾಡಬೇಕು ಮತ್ತು ವಿತ್ತೀಯ ಕಾರ್ಯಕಲಾಪಗಳಲ್ಲಿ ಭಾಗವಹಿಸುವಂತಹ ಎಲ್ಲ ಸದಸ್ಯರಿಗೂ ಅವಕಾಶವನ್ನು ಕೊಡಬೇಕು, ವಿತ್ತೀಯ ಕಾರ್ಯಕಲಾಪಗಳ ಬಗ್ಗೆ ಈ ಸದನದಲ್ಲಿ ಬಹಳ ಚರ್ಚೆ ನಡೆಯಬೇಕು ಎನ್ನುವ ಬಗ್ಗೆ ತಾವೆಲ್ಲರೂ ಸಲಹೆಗಳನ್ನು ಕೊಟ್ಟಿದ್ದೀರಿ. ಸಭಾನಾಯಕರು ಕೂಡಾ ಅದಕ್ಕೆ ಒಪ್ಪಿಗೆ ಸೂಚಿಸಿದ್ದಾರೆ. ಇದು ವಿತ್ತೀಯ ಕಾರ್ಯಕಲಾಪದ ಅಧಿವೇಶನ, ವಿತ್ತೀಯ ಕಾರ್ಯಕಲಾಪಗಳ ಬಗ್ಗೆ ಬಹಳ ಚರ್ಚೆ ಮಾಡುವುದು ಅಗತ್ಯವಾಗಿದೆ. ಅದಕ್ಕಾಗಿ ಇವತ್ತು ಸದನವನ್ನು 10ಗಂಟೆಗೆ ಕರೆಯಲಾಗಿದೆ. ಮುಂದಿನ ದಿನಗಳಲ್ಲಿಯು ಕೂಡಾ ಸದನವನ್ನು ಬೇಗ ಕರೆಯಬೇಕು ಎನ್ನುವ ತೀರ್ಮಾನವನ್ನು ತಾವೇ ಕೊಟ್ಟಿದ್ದಿರಿ. ಆದರೆ ಇವತ್ತು ಕಾರ್ಯಕಲಾಪಗಳ ಪಟ್ಟಿಯಂತೆ ನಡೆಯದೆ ಇರುವುದು ಬಹಳ ವಿಷಾದನೀಯ, ರಾಜ್ಯದಲ್ಲಿ ಬರಗಾಲವಿದೆ, ಕುಡಿಯುವ ನೀರಿಗೆ ತೊಂದರೆ ಇದೆ, ರಾಜ್ಯದ ಬಹಳಷ್ಟು ಜ್ವಲಂತ ಸಮಸ್ಯೆಗಳ ಬಗ್ಗೆ ಬಜೆಟ್ ಮೇಲೆ ಚರ್ಚೆ ಮಾಡಿ ಈ ಸಮಸ್ಯೆಗಳ ಬಗ್ಗೆ ಸರ್ಕಾರಕ್ಕೆ ಸಲಹೆಗಳನ್ನು ಕೊಡುವಂತಹ ನಿಟ್ಟಿನಲ್ಲಿ ಅನೇಕ ವಿಷಯಗಳು ಚರ್ಚೆಯಾಗಬೇಕು. ದಯಮಾಡಿ ಎಲ್ಲರೂ ತಮ್ಮ–ತಮ್ಮ ಆಸನಗಳಿಗೆ ಬಂದು ಸದನ ನಡೆಯಲು ಅವಕಾಶ ಮಾಡಿಕೊಡಬೇಕು. ಮಧ್ಯಾಹ್ನ ಕಾನೂನು ಸಚಿವರು ಬಂದ ಮೇಲೆ ಮೂರು ಗಂಟೆಗೆ ತಾವು ಪ್ರಸ್ತಾಪಿಸುತ್ತಿರುವ ವಿಷಯದ ಮೇಲೆ ಚರ್ಚೆ ಮಾಡಲು ನಾನು ಅವಕಾಶ ಮಾಡಿಕೊಡುತ್ತೇನೆ. ದಯಮಾಡಿ ತಮ್ಮ ಆಸನಗಳಿಗೆ ಬಂದು ಸದನ ನಡೆಸಲು ಅವಕಾಶ ಮಾಡಿಕೊಡಬೇಕೆಂದು ನಾನು ತಮ್ಮಲ್ಲಿ ಮತ್ತೊಮ್ಮೆ ವಿನಂತಿ ಮಾಡಿಕೊಳ್ಳುತ್ತೇನೆ.

**ಶ್ರೀ ಕೆ.ಎಸ್.ಈಶ್ವರಪ್ಪ(ವಿರೋಧ ಪಕ್ಷದ ನಾಯಕರು)**:– ಮಾನ್ಯ ಸಭಾಪತಿಗಳೆ, ತಾವು ಹೇಳುವುದು ಸರಿ ಇದೆ. Business Advisory Committee ಯಲ್ಲಿ ನಾನು ಮಾತನಾಡಿರುವುದು ನಿಜ. ಮಾನ್ಯ ಹೊರಟ್ಟಿಯವರು ಮತ್ತು ನಾನು ಸದನವನ್ನು 10ಗಂಟೆಗೆ ಕರೆದು ಎಲ್ಲ ವಿಚಾರಗಳನ್ನು ಚರ್ಚೆ ಮಾಡೋಣ ಎಂದು ಮಾತನಾಡಿರುವುದು ನಿಜ. ರಾಜ್ಯದಲ್ಲಿ ಭೀಕರ ಬರಗಾಲವಿದೆ, ಕುಡಿಯುವ ನೀರಿನ ಸಮಸ್ಯೆ ಇದೆ, ಇವುಗಳ ಬಗ್ಗೆ ಚರ್ಚೆ ಮಾಡಬೇಕು, ವಿತ್ತೀಯ ಕಲಾಪಗಳ ಬಗ್ಗೆ ಮಾತನಾಡಬೇಕು. ಹಿಂದಿನ ಬಜೆಟ್‌ನಲ್ಲಿ ಏನೇನು ಮಾಡಿದ್ದಾರೆ ಅವುಗಳ ಬಗ್ಗೆಯು ಚರ್ಚೆ ಮಾಡಬೇಕಾಗುತ್ತದೆ ಎಂದು ನಾವು ಮಾತನಾಡಿರುವುದು ನಿಜ. ಈ ಚರ್ಚೆ ನಡೆಯುವ ಸಂದರ್ಭದಲ್ಲಿ ತಮ್ಮ ಪೀಠದಿಂದ ಏನು ಆದೇಶ ಬಂದಿದೆ, ಅದನ್ನು ಸರ್ಕಾರ ಪಾಲಿಸಿ ವರದಿ ಮಂಡನೆ ಮಾಡಬೇಕಾಗಿತ್ತು ಎನ್ನುವುದಷ್ಟೆ ನಮ್ಮ ಮನವಿ. ಬೇರೆ ಏನು ಇಲ್ಲ. ತಮ್ಮ ಪೀಠದಿಂದ ಬಂದ ಆದೇಶ. ಇದೇನು ಹೊಸದಲ್ಲ, ಮೂರು ಸಾರಿ ಹೇಳಿದ್ದೀರಿ. ಇದನ್ನು reject ಮಾಡಿಬಿಟ್ಟಿದ್ದೇವೆ ಎಂದು ಇವತ್ತು ಮಾನ್ಯ ಮುಖ್ಯಮಂತ್ರಿಗಳು ಹೇಳಿದ ಮೇಲೆ ನನಗೆ ದೊಡ್ಡ ಆಶ್ಚರ್ಯವಾಯಿತು. ಇದನ್ನು reject ಮಾಡಿದ್ದೇವೆ ಎಂದರೆ ಇದರ ಅರ್ಥ ನಾವು ವರದಿ ಮಂಡನೆ ಮಾಡುವುದಿಲ್ಲ ಎಂದು.

**ಉಪಸಭಾಪತಿಯವರು**:– ಆ ವಿಚಾರದ ಬಗ್ಗೆ ಚರ್ಚೆ ಬೇಡ. ಮಂತ್ರಿಗಳು ಬರಬೇಕು, ಸಭೆ ನಡೆಯಬೇಕು ಎನ್ನುವ ವಿಚಾರದ ಬಗ್ಗೆ ಮಾತನಾಡಿ. ಮತ್ತೆ ಹಿಂದಿನದ್ದನೆ ಮಾತನಾಡುವುದು ಬೇಡ. ದಯಮಾಡಿ ನಾನು ವಿನಂತಿ ಮಾಡಿಕೊಳ್ಳುತ್ತೇನೆ ಸಹಕರಿಸಿ, ತಾವು ಹಿರಿಯರು, ಸದನ ನಡೆಸಲು ಸಹಕಾರ ಮಾಡಿ ಎಂದು ದಯಮಾಡಿ ವಿನಂತಿ ಮಾಡಿಕೊಳ್ಳುತ್ತೇನೆ.

**ಶ್ರೀ ಕೆ.ಎಸ್.ಈಶ್ವರಪ್ಪ(ವಿರೋಧ ಪಕ್ಷದ ನಾಯಕರು):–** ಮಾನ್ಯ ಸಭಾಪತಿಗಳೆ, ಮಾನ್ಯ ಮುಖ್ಯಮಂತ್ರಿಗಳು ಮಾತನಾಡುತ್ತಾ ನಾವು ಈ ವರದಿಯನ್ನು ಮಂಡಿಸುವುದಿಲ್ಲ ಎನ್ನುವ ರೂಪದಲ್ಲಿ ಹೇಳಿಬಿಟ್ಟಿದ್ದಾರೆ. ಕಾನೂನು ಸಚಿವರು ಈಗಾಗಲೇ ಅವರನ್ನು ಭೇಟಿ ಮಾಡಿದ್ದಾರೆ, ಇವರನ್ನು ಭೇಟಿ ಮಾಡಿದ್ದಾರೆ ಎಂದರೆ ಏನು ಅರ್ಥ? ಈಗಾಗಲೆ ಕಾನೂನು ಸಚಿವರು ತಜ್ಞರ ಜೊತೆಯಲ್ಲಿ ಚರ್ಚೆ ಮಾಡಿದ್ದಾರೆ, ಮಾನ್ಯ ಸಭಾಪತಿಯವರು ಕೂಡಾ ತಜ್ಞರ ಜೊತೆಯಲ್ಲಿ ಚರ್ಚೆ ಮಾಡಿ ಈಗಾಗಲೆ ರೂಲಿಂಗ್ ಕೊಟ್ಟು ಆಗಿದೆ. ಇಷ್ಟು ಆದ ಮೇಲೆ ಮತ್ತೆ ಕಾನೂನು ಸಚಿವರು ತಜ್ಞರ ಜೊತೆಯಲ್ಲಿ ಚರ್ಚೆ ಮಾಡುತ್ತಾರೆ ಎಂದು ಮಾನ್ಯ ಮುಖ್ಯಮಂತ್ರಿಗಳು ಹೇಳಿದರೆ ಏನು ಅರ್ಥ? ಇದರ ಅರ್ಥ ಇದನ್ನು ಮುಚ್ಚಿ ಹಾಕಬೇಕು ಎನ್ನುವುದು.

**ಉಪಸಭಾಪತಿಯವರು:–** ಈ ವಿಚಾರಗಳ ಬಗ್ಗೆ ಮಂತ್ರಿಗಳು ಬಂದಮೇಲೆ ಚರ್ಚೆ ಮಾಡಿ, ಅದಕ್ಕೆ ನಾನು ಅವಕಾಶ ಕೊಡುತ್ತೇನೆ. ದಯಮಾಡಿ ಈಗ ಸದನ ನಡೆಸಲು ಅವಕಾಶ ಮಾಡಿಕೊಡಿ.

**ಶ್ರೀ ಕೆ.ಎಸ್.ಈಶ್ವರಪ್ಪ:–** ಮಾನ್ಯ ಸಭಾಪತಿಗಳೆ, ಪ್ರಶ್ನೋತ್ತರ ಸಮಯದಲ್ಲಿ ಬಂದೇ ಬರುತ್ತಾರೆ ಆಗ ಉತ್ತರ ಕೊಡಿಸುತ್ತೇವೆ ಎಂದು ಹೇಳಿದರು. ಅವರು ಪ್ರಶ್ನೋತ್ತರಕ್ಕೆ ಬರದೆ ತಪ್ಪಿಸಿಕೊಂಡರು. ಈಗ ಇದ್ದಕ್ಕಿದ್ದ ಹಾಗೆ ರಾಜ್ಯಪಾಲರ ಜೊತೆ ಹೋಗಿದ್ದಾರೆಂದು ಹೇಳುತ್ತಿದ್ದಾರೆ. ಅವತ್ತು ಹೇಳಿದ್ದು ಏನು? ಆವೊತ್ತು ಕಾನೂನು ಸಚಿವರು ಪ್ರಶ್ನೋತ್ತರಕ್ಕೆ ಬರುತ್ತಾರೆ, ಆಗ ನಾವು ಉತ್ತರ ಕೊಡಿಸುತ್ತೇವೆ ಎಂದು ಹೇಳಿದ್ದಾರೆ. ಅವತ್ತಿನಿಂದ ಇವತ್ತಿನವರೆಗೆ ಉತ್ತರ ಕೊಡಿಸುತ್ತೇವೆ ಎಂದು ಹೇಳುತ್ತಾರೆ ವಿನ: ವರದಿ ಮಂಡಿಸುತ್ತೇವೆ ಎಂದು ಸಭಾನಾಯಕರ ಬಾಯಿಯಿಂದಲೂ ಬರಲಿಲ್ಲ, ಮುಖ್ಯಮಂತ್ರಿಗಳು ಹೇಳತ್ತಿಲ್ಲ. ಇದನ್ನು ನೋಡಿಕೊಂಡು ನಾವು ಸುಮ್ಮನೆ ಇರಬೇಕಾ? ಪೀಠದಿಂದ ಬಂದ ಆದೇಶವನ್ನು ಪರಿಪಾಲನೆ ಮಾಡುವ ಕರ್ತವ್ಯ ನಮ್ಮದು. ಸರ್ಕಾರ ವರದಿಯನ್ನು ಮಂಡಿಸಬೇಕು ಎಂದು ಪೀಠದಿಂದ ಬಂದಿರುವ ಆದೇಶದ ಬಗ್ಗೆ ತಾವು ಅವರಿಗೆ ಹೇಳಬೇಕಾಗಿತ್ತು. ಅದನ್ನು ಬಿಟ್ಟು ನೀವು ನಮಗೆ ಹೇಳುತ್ತಿದ್ದೀರಿ.

**ಉಪಸಭಾಪತಿಯವರು:–** ಆಯಿತು ವಿರೋಧ ಪಕ್ಷದ ನಾಯಕರೆ ದಯಮಾಡಿ ಕುಳಿತುಕೊಳ್ಳಿ.

**ಶ್ರೀ ಎಸ್.ಆರ್.ಪಾಟೀಲ್(ಸಭಾನಾಯಕರು):–** ಮಾನ್ಯ ಸಭಾಪತಿಗಳೆ, ತಾವು ಬಹಳಷ್ಟು ಸುದೀರ್ಘವಾದ ವಿಚಾರಗಳನ್ನು ಮಂಡನೆ ಮಾಡಿದ್ದೀರಿ. ಮೊನ್ನೆ Business Advisory Committee ಯಲ್ಲಿ ಏನು ಕೆಲವು ನಿರ್ಣಯಗಳನ್ನು ತೆಗೆದುಕೊಳ್ಳಲಾಯಿತು. 11ಗಂಟೆಗೆ ನಡೆಯುವ ಸದನವನ್ನು 10ಗಂಟೆಗೆ prepone ಮಾಡಲಾಯಿತು. ಇದಕ್ಕೆ ಎರಡು ಕಡೆಯ ಎಲ್ಲ ಸದಸ್ಯರು ಒಪ್ಪಿಕೊಂಡಿದ್ದಾರೆ. ಎರಡು ಕಡೆಯ ಎಲ್ಲ ಸದಸ್ಯರು ವಿತ್ತೀಯ ಕಾರ್ಯಕಲಾಪಗಳಲ್ಲಿ ಭಾಗವಹಿಸುವ ಇಚ್ಚೆಯನ್ನು ವ್ಯಕ್ತಪಡಿಸಿದ್ದರಿಂದ, ಬಹುತೇಕವಾಗಿ ಸಮಯ ಸಾಕಾಗುವುದಿಲ್ಲ ನಿಗದಿತ ಅವಧಿಯಲ್ಲಿ ಮುಕ್ತಾಯಗೊಳಿಸಬೇಕು, ಎಲ್ಲರಿಗೂ ಅವಕಾಶ ಸಿಗಬೇಕು ಎನ್ನುವ ಸದ್ದುದೇಶದಿಂದ 11ಗಂಟೆಗೆ ಇರುವುದನ್ನು 10ಗಂಟೆಗೆ prepone ಮಾಡಿ, ಇವತ್ತು 10ಗಂಟೆಗೆ ಕರೆಯಲಾಯಿತು. ಈಗ 10 ಗಂಟೆಯಿಂದ 12 ಗಂಟೆ 30 ನಿಮಿಷವಾಯಿತು. ನಾನು ಮೊನ್ನೆ ಏನು ಹೇಳಿದೆ, it will come under the domain of a Law Minister. Law Minister will come and he will represent.

**(ಗೊಂದಲ)**

ನೀವು ಮಧ್ಯ ಮಾತನಾಡಬೇಡಿ. Please don't talk when you are in the well. ನನಗೂ ಒಂದು limitation ಇದೆ. ಕಾನೂನು ಸಚಿವರು ಇವತ್ತು ಬರುತ್ತಾರೆ, ಈ ದಿವಸ ಅವರ ಪ್ರಶ್ನೆಯು ಇದೆ ಅದಕ್ಕೆ ಉತ್ತರ ಕೊಡುವ ಅವಕಾಶವಿದೆ ಅವರು ಬಂದೆ ಬರುತ್ತಾರೆ ಎಂದು ನಾನು ಹೇಳಿದ್ದೆನೆ. ಆದರೆ ಇವತ್ತು ಶಿವಮೊಗ್ಗದಲ್ಲಿರುವ ಕುವೆಂಪು ವಿಶ್ವವಿದ್ಯಾನಿಲಯದ ಘಟಿಕೋತ್ಸವಕ್ಕೆ ಮಾನ್ಯ ರಾಜ್ಯಪಾಲರ ಜೊತೆಯಲ್ಲಿ Helicopter ನಲ್ಲಿ ಹೋಗಿದ್ದೆನೆ ನಾನು ಎಂದು ನನ್ನ ಜೊತೆಯಲ್ಲಿ ದೂರವಾಣಿ ಮುಖಾಂತರ ಮಾತನಾಡಿದ್ದಾರೆ, ತಮಗೂ ಮಾತನಾಡಿದ್ದಾರೆ, ಮಾನ್ಯ ಮುಖ್ಯಮಂತ್ರಿಗಳ ಜೊತೆಯಲ್ಲಿ ಕೂಡ ಮಾತನಾಡಿದ್ದಾರೆ,

ಮುಖ್ಯ ಸಚೇತಕರ ಜೊತೆಯಲ್ಲಿ ಮಾತನಾಡಿದ್ದಾರೆ. ಯಾವುದೆ ಸಂದರ್ಭದಲ್ಲಿ ನಾನು ಮೂರು ಗಂಟೆಯೊಳಗಾಗಿ ಬರುತ್ತೇನೆ, ಬಂದು ಅದಕ್ಕೆ ಸಂಭಂದಿಸಿದ ವಿಧಿ–ವಿಧಾನಗಳನ್ನು ಮಾಡಬೇಕು, ಅದನ್ನು ನಿಶ್ಚಿತವಾಗಿ ಮಾಡುತ್ತೇನೆ ಎಂದು ಹೇಳಿರುವುದನ್ನು ಸದನ ಪ್ರಾರಂಭದಲ್ಲಿಯೇ ಹೇಳಿದ್ದೇನೆ. ಆದರೆ ನೀವು ಅದನ್ನು ಒಪ್ಪದೆ ಇಲ್ಲಾ ಪ್ರಶ್ನೋತ್ತರ ಸಮಯದಲ್ಲಿಯೇ ಮಂಡನೆ ಮಾಡುತ್ತೇವೆ ಎಂದು ಹೇಳಿದ್ದೀರಿ ಎಂದು ಹೇಳುತ್ತಿದ್ದಿರಿ. ಇವತ್ತು ಅವರ ಪ್ರಶ್ನೆ ಇತ್ತು, ಆದರೆ ಈಗ ಸಮಯವಾಗಿ ಹೋಗಿದೆ. ಪೀಠದಿಂದ ಬಂದ ವಿಚಾರವಾಗಿ ಇವತ್ತೆ ನಮ್ಮ ಕಾನೂನು ಸಚಿವರು ಬಂದು ಪೀಠದ ಆದೇಶದ ಪ್ರಕಾರ ಏನು ವಿಧಿ–ವಿಧಾನಗಳನ್ನು ಪಾಲನೆ ಮಾಡಲು, ಎಲ್ಲ ಕಾನೂನು ತಜ್ಞರ ಜೊತೆಯಲ್ಲಿ ಅವರು ಕೂಡಾ ಚರ್ಚೆ ಮಾಡಿ ಒಂದು concrete ವಿಚಾರವನ್ನು ಸದನಕ್ಕೆ ತಿಳಿಸಲು ಬರುತ್ತಾರೆ. 3ಗಂಟೆವರೆಗೆ ತಡೆದುಕೊಳ್ಳಲು ಇವರು ತಯಾರಿಲ್ಲ. ಈ ವರ್ಷ 40ವರ್ಷಗಳಿಂದ ಕಂಡಿರದಂತಹ ಭೀಕರ ಬರಗಾಲ ಬಂದಿದೆ. ಇಡೀ ಜನ–ಜಾನುವಾರಗಳು ನೀರು ಇಲ್ಲದೆ ಕಂಗಾಲಾಗುವಂತಹ ಪರಿಸ್ಥಿತಿ ಬಂದಿದೆ. ಸರ್ಕಾರ ಯುದ್ಧೋಪಾದಿಯಲ್ಲಿ ನೀರನ್ನು ಒದಗಿಸುವಂತಹ ಕೆಲಸ ಮಾಡುತ್ತಿರುವಂತಹ ಸಂದರ್ಭದಲ್ಲಿ ಬಹುತೇಕ ಎಲ್ಲರಿಗೂ ಆತಂಕವಿದೆ. ಇದರ ಬಗ್ಗೆ ಬೆಳಕು ಚೆಲ್ಲುವಂತಹ ಸಮಯವಿದು. ನಿತ್ಯ ಕಾರ್ಯಕಲಾಪದಲ್ಲಿ ಚರ್ಚೆ ಮಾಡುವಂತಹ ಸಂದರ್ಭದಲ್ಲಿ ಜನರ ಕುಡಿಯುವ ನೀರಿನ ವಿಚಾರ, ಜನ–ಜಾನುವಾರಗಳು ಕುಡಿಯುವ ನೀರಿನ ವಿಚಾರ, ಜಾನುವಾರಗಳಿಗೆ ಮೇವವನ್ನು ಒದಗಿಸುವ ವಿಚಾರ, ಜನರಿಗೆ ಉದ್ಯೋಗವನ್ನು ಒದಗಿಸುವಂತಹ ವಿಚಾರ, ಅತ್ಯಂತ ಜಲ್ವಂತ ಸಮಸ್ಯೆಗಳು ಇಂದು ಬಂದಿವೆ. ನಾಲ್ಕು ದಶಕಗಳಿಂದ ಕಂಡಿರದಂತಹ ಭೀಕರ ಬರಗಾಲ ಬಂದಿದೆ. ಈಗ ಅಧಿವೇಶನ ಇರುವುದರಿಂದ ಇಲ್ಲಿ ಚರ್ಚೆ ಮಾಡಿ ರಾಜ್ಯದ ಜನರ ಅನೇಕ ಸಮಸ್ಯೆಗಳಿಗೆ ಪರಿಹಾರ ಕಲ್ಪಿಸುವಂತಹ ಅವಕಾಶ ಸಿಗುತ್ತದೆ ಎನ್ನುವ ವಿಚಾರವನ್ನು ಇಟ್ಟುಕೊಂಡು ನಾವು ಬಹಳ ಸಂತೋಷದಿಂದ ಚರ್ಚೆ ಮಾಡೋಣ, ವಿರೋಧ ಪಕ್ಷದವರು ನಮಗೆ ಮಾರ್ಗದರ್ಶನವನ್ನು, ಸಲಹೆಗಳನ್ನು ನೀಡುತ್ತಾರೆ. ಅವು ಎಲ್ಲವನ್ನು ನಾವು implement ಮಾಡಿ, ರಾಜ್ಯದ ಜನರ ಕಷ್ಟಕ್ಕೆ ಪರಿಹಾರವನ್ನು ಕಂಡುಕೊಳ್ಳಬೇಕು ಎನ್ನುವ ವಿಚಾರವನ್ನು ಇಡುಕೊಂಡಿರುವ ಸಂದರ್ಭದಲ್ಲಿ, ಮೂರು ಗಂಟೆಗೆ ಕಾನೂನು ಸಚಿವರು ಬಂದು ಉತ್ತರಿಸುತ್ತಾರೆ ಎಂದು ಹೇಳಿದರು ಇವರಿಗೆ ವ್ಯವಧಾನವಿಲ್ಲದೆ, ಈಗಲೇ ಹೇಳಬೇಕು, ಹೀಗೆ ನೀವು ಮಾಡಬೇಕು ಎಂದು ಸರ್ಕಾರಕ್ಕೆ ತಾವು ಇದೇ ರೀತಿಯಾಗಿ ಉತ್ತರ ಕೊಡಬೇಕೆಂದು dictate ಮಾಡುವುದು ವಿರೋಧ ಪಕ್ಷದ ನಾಯಕರಿಗೆ, ವಿರೋಧ ಪಕ್ಷದ ಸದಸ್ಯರಿಗೆ ಯೋಗ್ಯವಲ್ಲ ಎನ್ನುವುದನ್ನು ನಾನು ಹೇಳಬಯಸುತ್ತೇನೆ. ಮೂರು ಗಂಟೆಯವರೆಗೆ ಎಂದರೆ ಇನ್ನೆಷ್ಟು ಸಮಯ ಇದೆ? ಅಂದರೆ ಇನ್ನು ಎರಡೂವರೆ ಗಂಟೆಯಲ್ಲಿ ಮಾನ್ಯ ಕಾನೂನು ಸಚಿವರು ಬರುತ್ತಿದ್ದಾರೆ. ಅದರಲ್ಲಿ ಹತ್ತದಿನೈದು ನಿಮಿಷ ಹೆಚ್ಚ–ಕಡಿಮೆ ಆಗಬಹುದು. ಮಾನ್ಯ ಕಾನೂನು ಸಚಿವರು ಮಾನ್ಯ ಸಭಾಪತಿಯವರಿಗೆ ಮತ್ತು ಮಾನ್ಯ ವಿರೋಧ ಪಕ್ಷದ ನಾಯಕರಿಗೆ ಮನವಿ ಮಾಡಿಕೊಳ್ಳುವ ಬಗ್ಗೆ ಹೇಳಿದ್ದಾರೆ. ಇಷ್ಟೆಲ್ಲಾ ಹೇಳಿ, ಅವರು ಬಂದು ಹೇಳಿಕೆ ನೀಡಿ ಕ್ರಮ ಕೈಗೊಳ್ಳುತ್ತಾರೆ ಎಂದು ಹೇಳಿದರೂ ಇದೇ ರೀತಿ ಮಾಡಬೇಕು ಎಂದು ಸರ್ಕಾರಕ್ಕೆ ಡಿಕ್ಟೇಟ್ ಮಾಡುವುದು ವಿರೋಧ ಪಕ್ಷದ ನಾಯಕರ ಹಿರಿತನ ಮತ್ತು ಅವರ ಅನುಭವಕ್ಕೆ ಸೂಕ್ತವಲ್ಲ. ಸರ್ಕಾರದ ಪರವಾಗಿ ನಾನು ಮನವಿ ಮಾಡುವುದೇನೆಂದರೆ, ದಯಮಾಡಿ ಸದನ ನಡೆಸಲು ಅವಕಾಶ ಮಾಡಿಕೊಡಬೇಕು. ಅವರ ಸ್ಥಾನಗಳಿಗೆ ತೆರಳಬೇಕು, ರಾಜ್ಯದ ಜ್ವಲಂತ ಸಮಸ್ಯೆಗಳಿಗೆ ಪರಿಹಾರ ಕಂಡು ಕೊಳ್ಳಲು ಸರ್ಕಾರಕ್ಕೆ ಮಾರ್ಗದರ್ಶನ ಮತ್ತು ಸಲಹೆಗಳನ್ನು ನೀಡಿ, ರಾಜ್ಯದ ಜನತೆಯ ಕಲ್ಯಾಣಕ್ಕೆ ಅಧಿವೇಶನದಲ್ಲಿ ಭಾಗವಹಿಸಬೇಕು ಮತ್ತು ಅವರ ಸ್ಥಾನಗಳಿಗೆ ಹೋಗಬೇಕೆಂದು ಮತ್ತೊಮ್ಮೆ ಮನವಿ ಮಾಡಿಕೊಳ್ಳುತ್ತೇನೆ. ಬಹುತೇಕ ಅವರಿಗೆ ಕನ್ವಿನ್ಸ್ ಆಗಿದೆ ಎಂದು ಭಾವಿಸಿ ಎಲ್ಲರೂ ಅವರವರ ಸ್ಥಾನಗಳಿಗೆ ಹೋಗಿ ಸುಗಮ ಕಲಾಪ ನಡೆಸಲು ಅವಕಾಶ ಕಲ್ಪಿಸುತ್ತಾರೆ. ಮಾನ್ಯ ಕಾನೂನು ಸಚಿವರು ಬಂದ ನಂತರ ಏನು ವಿಧಿ ವಿಧಾನ ಮಾಡಬೇಕೋ, ಅದನ್ನು ನಿಶ್ಚಿತವಾಗಿ ಮಾಡುತ್ತಾರೆ ಎಂದು ಮತ್ತೊಮ್ಮೆ ಮನವಿ ಮಾಡಿಕೊಳ್ಳುತ್ತೇನೆ. ದಯಮಾಡಿ ಅವರವರ ಸ್ಥಾನಗಳಿಗೆ ತೆರಳಿ ಕಲಾಪದಲ್ಲಿ ಭಾಗವಹಿಸಬೇಕು. ನಾಡಿನ ಜನತೆಯ ಬಗ್ಗೆ ನಿಜವಾಗಲೂ ಕಾಳಜಿ, ಕಕ್ಕಲಾತಿ, ಅಭಿಮಾನ, ಪ್ರೀತಿ–ವಿಶ್ವಾಸ ಇದ್ದರೆ ಕಲಾಪಗಳಲ್ಲಿ ಭಾಗವಹಿಸಿ ಸುಗಮ ಕಲಾಪ ನಡೆಸಬೇಕೆಂದು ಮನವಿ ಮಾಡುತ್ತೇನೆ. ಇಲ್ಲವೆಂದರೆ ಅವರಿಗೆ ಬಿಟ್ಟದ್ದು, ಆ ಭಗವಂತನೆ ಅವರನ್ನು ರಕ್ಷಣೆ ಮಾಡಬೇಕು.

**ಶ್ರೀ ಪುಟ್ಟಣ್ಣ (ಶಿಕ್ಷಕರ ಕ್ಷೇತ್ರ):–** ಮಾನ್ಯ ಸಭಾಪತಿಯವರೇ, ಒಂದೇ ವಿಷಯವನ್ನು ನಾವು ಎಷ್ಟೊತ್ತು ಮತ್ತು ಎಷ್ಟು ಸಾರಿ ಕೇಳಬೇಕು. ಅವರು ಹೇಳಿದ್ದನ್ನೇ ಹೇಳುತ್ತಾರೆ. ಇವರೂ ಹೇಳಿದ್ದನ್ನೆ ಹೇಳುತ್ತಾರೆ. ನಮಗೆ ನಿಮ್ಮಂದ ನ್ಯಾಯ ಬೇಕು. ದಯಮಾಡಿ ಏನಾದರೊಂದು ತೀರ್ಮಾನ ಮಾಡಬೇಕು. ನಾವು ಸದನದ ಕಲಾಪ ನಡೆಯಬೇಕೆಂದು ಮನವಿ ಮಾಡುತ್ತಿದ್ದೇವೆ. ಏಕೆಂದರೆ ಅಜೆಂಡಾ ಒಂದು ದಿವಸವೂ ಸರಿಯಾಗಿ ಆಗಲೇ ಇಲ್ಲ. ನಾವೆಲ್ಲರೂ ಅಜೆಂಡಾದಲ್ಲಿರುವ ವಿಷಯ ಬರಲಿ ಎಂದು ಕಾಯುತ್ತಿದ್ದೇವೆ. ಇಬ್ಬರೂ ಹೇಳಿದ್ದನ್ನೇ ಹೇಳುತ್ತಿದ್ದಾರೆ. ತಾವು ಏನಾದರೂ ತೀರ್ಮಾನ ಪ್ರಕಟ ಮಾಡಿದರೆ ನಮ್ಮೆಲ್ಲರಿಗೂ ಒಳ್ಳೆಯದಾಗುತ್ತದೆ.

ಶ್ರೀ **ಕೆ.ಬಿ. ಶಾಣಪ್ಪ (ನಾಮನಿರ್ದೇಶಿತರು):–** ನನ್ನಲ್ಲಿ ಒಂದು ಸಂಶಯ ಬರುತ್ತಿದೆ. ನಾನೂ ಕೂಡ ಸಂಸದೀಯ ವ್ಯವಹಾರದಲ್ಲಿ ಎಲ್ಲರ ಜೊತೆ ಸುಮಾರು ವರ್ಷಗಳಿಂದ ಇದ್ದೇನೆ. ಮಾನ್ಯ ಸಭಾಪತಿಯವರು ಒಂದು ರೂಲಿಂಗ್ ಕೊಟ್ಟಿದ್ದಾರೆ. ನಂತರ ಸಭಾಪತಿಯವರು ಏನೋ ಒಂದು ಕೆಲಸದ ಮೇಲೆ ಹೋಗಿದ್ದಾರೆ. ಆ ಪೀಠದ ಮೇಲೆ ಕುಳಿತ ತಾವು ಈಗ ಸಭಾಪತಿಗಳಾಗಿದ್ದೀರಿ. ಮಾನ್ಯ ಸಭಾಪತಿಯವರು ನೀಡಿದ್ದ ರೂಲಿಂಗ್ ಅನ್ನು ಎತ್ತಿ ಹಿಡಿಯವ ಜವಾಬ್ದಾರಿ ತಮ್ಮ ಮೇಲಿದೆ. ಅವರು ಕೊಟ್ಟ ರೂಲಿಂಗ್ ಅನ್ನು ವೈಲೇಟ್ ಮಾಡುವುದಕ್ಕೆ ಯಾವುದೇ ಕಾನೂನಿನಲ್ಲಿ ಅವಕಾಶ ಇಲ್ಲ. ಆದ್ದರಿಂದ ದಯಮಾಡಿ ಸರ್ಕಾರಕ್ಕೆ ಒತ್ತಡ ತಂದು, ಸರ್ಕಾರವು ಸದನದಲ್ಲಿ ಒಪ್ಪಿದ ರೀತಿ ಆ ವರದಿಯನ್ನು ಸದನದಲ್ಲಿ ಇಡಲು ಒತ್ತಾಯ ಮಾಡಬೇಕು. ಆದರೆ ಮಾನ್ಯ ಸಭಾಪತಿಯವರು ಕೊಟ್ಟ ರೂಲಿಂಗ್ ಅನ್ನು violate ಮಾಡುವುದಕ್ಕೆ ಆಗುವುದಿಲ್ಲ. ಖಜಿ he feels that you can do it, then it becomes a legal matter. ಅವರು ಹೇಳಿರುವ ಬಗ್ಗೆ ತಾವು ಒಂದು ಕ್ಲಿಯರೆನ್ಸ್ ಮಾಡಿದರೆ ನಾವು ಕುಳಿತುಕೊಳ್ಳುತ್ತೇವೆ.

**ಉಪ ಸಭಾಪತಿಯವರು:–** ದಯಮಾಡಿ ಮಾನ್ಯ ಸದಸ್ಯರಲ್ಲಿ ವಿನಂತಿಸುವುದೇನೆಂದರೆ, ತಾವುಗಳು ಸದನ ನಡೆಯಲು ಅವಕಾಶ ಮಾಡಿಕೊಡಬೇಕು.

ಶ್ರೀ ಕೆ.ಬಿ. ಶಾಣಪ್ಪ:– ಈಗಾಗಲೇ ಆ ಪೀಠದ ಮೇಲೆ ಕುಳಿತ ಮಾನ್ಯ ಸಭಾಪತಿಯವರು ಈ ಬಗ್ಗೆ ಒಂದು ನಿರ್ಣಯ ಕೊಟ್ಟಿದ್ದಾರೆ. ಅವರ ನಿರ್ಣಯದ ಪ್ರಕಾರ ಸರ್ಕಾರವು ವರದಿ ಮಂಡಿಸಬೇಕು. ಆ ನಿರ್ಣಯವನ್ನು ಎತ್ತಿ ಹಿಡಿಯಬೇಕೆ ಹೊರತು ರಿಜೆಕ್ಟ್ ಮಾಡುವುದಕ್ಕೆ ಆಗುವುದಿಲ್ಲ ಎಂದು ನನ್ನ ಅನಿಸಿಕೆ.

**ಉಪ ಸಭಾಪತಿಯವರು:–** ಈ ವಿಷಯದ ಬಗ್ಗೆ ಸರ್ಕಾರವು ಮಾನ್ಯ ಕಾನೂನು ಸಚಿವರಿಂದ ಹೇಳಿಸುತ್ತೇವೆ ಎಂದು ಹೇಳಿದ್ದು, ಅದನ್ನು 3 ಗಂಟೆಯವರೆಗೆ ಕಾಯ್ದು ಕೇಳುವ ಇಚ್ಛೆ ಇಲ್ಲವೇ? ತಾವು ಸಹಕಾರ ಕೊಡದಿದ್ದರೆ ಹೇಗೆ?

(ಗೊಂದಲ)

**ಶ್ರೀ ಕೆ.ಬಿ. ಶಾಣಪ್ಪ:–** ತಮ್ಮ ನಿರ್ದೇಶನವನ್ನು ಒಪ್ಪುತ್ತೇವೆ.

**ಉಪ ಸಭಾಪತಿಯವರು:–** ತಾವು ಹಿರಿಯ ಸದಸ್ಯರಿದ್ದೀರಿ. ಸರ್ಕಾರಕ್ಕೆ ಹೀಗೆ ಮಾಡಬೇಕೆಂದು ಪೀಠ ಹೇಳುವುದಕ್ಕೆ ಆಗುತ್ತದೆಯೇ? ಕುಳಿತುಕೊಳ್ಳಿ.

**ಶ್ರೀ ಕೆ.ಬಿ. ಶಾಣಪ್ಪ:–** ಅವರು ಒಂದು ನಿರ್ಣಯ ಕೊಟ್ಟಿದ್ದಾರೆ.

**ಉಪ ಸಭಾಪತಿಯವರು:–** ದಯಮಾಡಿ ಎಲ್ಲರೂ ಪೀಠಗಳಿಗೆ ಬನ್ನಿ. ದಯಮಾಡಿ ಬನ್ನಿ, ಸದನ ನಡೆಯಲು ಅವಕಾಶ ಮಾಡಿಕೊಡಿ.

(ಗೊಂದಲ)

**ಉಪ ಸಭಾಪತಿಯವರು:–** ಸದನವನ್ನು ಮುಂದಿನ ಸೋಮವಾರ 11 ಗಂಟೆಯವರೆಗೆ ಮುಂದೂಡುತ್ತೇನೆ.

(ಈ ಹಂತದಲ್ಲಿ ಬಾವಿಯಲ್ಲಿದ್ದ ಸದಸ್ಯರು ಶೇಮ್–ಶೇಮ್ ಎಂದು ಕೂಗುತ್ತಾ ಹೊರನಡೆದರು)

**(ಸದನವು ಮಧ್ಯಾಹ್ನ 12 ಗಂಟೆ 46 ನಿಮಿಷಕ್ಕೆ ಮುಕ್ತಾಯಗೊಂಡು ಪುನ: ದಿನಾಂಕ 28 ನೇ ಮಾರ್ಚ್ ಮಾಹೆ 2016ರ ಸೋಮವಾರದಂದು ಬೆಳಿಗ್ಗೆ 11 ಗಂಟೆಗೆ ಸೇರಲು ನಿಶ್ಚಯಿಸಿತು)**